ಅ.ಸ.ಪ.ಸಂ. ಸಕಇ/232/ಅಮುಕಾ/2021 ದಿನಾಂಕ. 03.09.2021

ಮಾನ್ಯರೆ,

ಶ್ರೀ ಬಿ. ಹರ್ಷವರ್ಧನ್, ಶಾಸಕರು, ನಂಜನಗೂಡು ವಿಧಾನಸಭಾ ಕ್ಷೇತ್ರ, ಮೈಸೂರು ಇವರ ಪತ್ರವನ್ನು ಲಗತ್ತಿಸಿದೆ. ಸದರಿ ಪತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿಶೇಷ ಘಟಕದ ಯೋಜನೆ ಮೂಲಕ ಪ್ರತಿ ವರ್ಷ ಕೇವಲ 20 ಎಸ್.ಸಿ/ಎಸ್.ಟಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗುತ್ತಿದ್ದು ಉಳಿದ ಸಂಶೋಧನಾ ವಿದ್ಯಾರ್ಥಿಗಳಿಗೆ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ ವಿಶೇಷ ಘಟಕ ಯೋಜನೆಯಲ್ಲಿ ಮಂಜೂರಾದ ಅನುದಾನದಲ್ಲಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡದೇ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನವನ್ನು ಉಪಯೋಗಿಸಿಕೊಂಡು ಪ.ಜಾತಿ ಮತ್ತು ಪ.ಪಂಗಡದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ತಿಳಿಸಿರುತ್ತಾರೆ.

ಶಾಸಕರು ಉಪ ಕುಲಪತಿಯವರೊಡನೆ ಮಾತನಾಡಿ ಸದರಿ ವಿಷಯದ ಬಗ್ಗೆ ವಿದ್ಯಾರ್ಥಿಗಳ ಬಳಿ ಕೂಲಂಕುಷವಾಗಿ ಮಾತನಾಡಲು ತಿಳಿಸಿದ್ದರೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ದೊರಕಬೇಕಾಗಿರುವ ಸೌಲಭ್ಯಗಳನ್ನು ನೀಡುವಲ್ಲಿ ವಿಫಲರಾಗಿದ್ದಾರೆ ಎಂದು ಪತ್ರದಲ್ಲಿ ತಿಳಿಸಿರುತ್ತಾರೆ.

ಆದ್ದರಿಂದ, ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಕೂಡಲೇ ಅಗತ್ಯ ಕ್ರಮವಹಿಸುವಂತೆ ಈ ಮೂಲಕ ಕೋರಿದೆ.

SPC 14-9-21

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

To Registrar to reply
13/9/21

ಶ್ರೀ. ಜಿ. ಕುಮಾರ ನಾಯಕ, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬೆಂಗಳೂರು.

13/9/2021

ಪ್ರತಿ:
1) ಉಪ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2) ರಿಜಿಸ್ಟ್ರಾರ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

# ಪರಿಶಿಷ್ಟರ ಪಿಎಚ್‌ಡಿ ಶಿಷ್ಯ ವೇತನ ವಿಸ್ತರಣೆಗೆ ಹರ್ಷವರ್ಧನ್ ಮನವಿ

**ನಂಜನಗೂಡು:** ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶೇಷ ಘಟಕ ಯೋಜನೆ



ಮೂಲಕ 20 ಮಂದಿಗೆ ಶಿಷ್ಯ ವೇತನ ನೀಡಲಾಗುತ್ತಿದ್ದು, ಈ ಪ್ರಮಾಣವನ್ನು ಹೆಚ್ಚಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಶಾಸಕ ಬಿ. ಹರ್ಷವರ್ಧನ್, ರಾಜ್ಯ ವಿಧಾನಸಭೆಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ.ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು ವಿವಿಯಲ್ಲಿ ವಿಶೇಷ ಘಟಕ ಯೋಜನೆ ಮೂಲಕ ಪ್ರತೀ ವರ್ಷ ಎಸ್‌ಸಿ ಹಾಗೂ ಎಸ್‌ಟಿ ಸಮುದಾಯದ 20 ಮಂದಿ ಸಂಶೋಧಕರಿಗೆ ಮಾತ್ರ ಶಿಷ್ಯ ವೇತನ ನೀಡಲಾಗುತ್ತಿದ್ದು, ಉಳಿದವರು ತಮ್ಮ ಸಂಶೋ ಧನೆಯನ್ನು ಮುಂದುವರೆಸಲು ಕಷ್ಟವಾಗುತ್ತಿದೆ. ಇನ್ನು ಮೈಸೂರು ವಿವಿಯಲ್ಲಿ ವಿಶೇಷ ಘಟಕ ಯೋಜನೆ ಮೂಲಕ ಮಂಜೂರಾದ ಅನುದಾನವನ್ನು ವಿದ್ಯಾರ್ಥಿಗಳಿಗೆ ಶಿಷ್ಯ ವೇತನವಾಗಿ ನೀಡದೆ ವಿವಿ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಲಾಗುತ್ತಿದೆ ಎಂಬ ದೂರುಗಳು ಕೇಳಿ ಬಂದಿವೆ ಎಂದು ಹೇಳಿದರು.

Scanned with CamScanner

-158-

**ಬಿ. ಹರ್ಷವರ್ಧನ್**, BE (IEM) PGDEBM
ಶಾಸಕರು
ನಂಜನಗೂಡು ವಿಧಾನಸಭಾ ಕ್ಷೇತ್ರ
ಮೈಸೂರು ಜಿಲ್ಲೆ

'ಶಾಸಕರ ಭವನ-4'
ಕೊಠಡಿ ಸಂಖ್ಯೆ : 437, ಬೆಂಗಳೂರು
ಫೋನ್ : 0821-2511533
ಮೊ.ಸಂ. : 99010 99955, 99800 99955
ಇಮೇಲ್ : harshavardhanbjp@gmail.com

ದಿನಾಂಕ:02.09.2021

ರವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಮಾನ್ಯರೇ,

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿಶೇಷ ಘಟಕದ ಯೋಜನೆ ಮೂಲಕ ಪ್ರತಿ ವರ್ಷ ಕೇವಲ 20 ಎಸ್.ಸಿ / ಎಸ್.ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗುತ್ತಿದ್ದು, ಉಳಿದ ಸಂಶೋಧನಾ ವಿದ್ಯಾರ್ಥಿಗಳು ಶಿಷ್ಯವೇತನದಿಂದ ವಂಚಿತರಾಗಿ ತಮ್ಮ ಸಂಶೋಧನೆಯನ್ನು ಮುಂದುವರೆಸಲು ಕಷ್ಟವಾಗುತ್ತಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ತಮ್ಮ ಸ್ವಂತ ಹಣದಲ್ಲಿ ಮಾರ್ಗದರ್ಶಕರನ್ನು ನಿಯೋಜಿಸಿಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿದ್ದರೂ, ಈ ಕಾರ್ಯಕ್ಕೂ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಯವರು ಅಡಚಣೆ ಉಂಟುಮಾಡುತ್ತಿದ್ದಾರೆ ಹಾಗೂ ಎಸ್.ಸಿ.ಪಿ/ಟಿ.ಎಸ್.ಪಿ ವಿಶೇಷ ಘಟಕ ಯೋಜನೆಯಲ್ಲಿ ಮಂಜೂರಾದ ಅನುದಾನದಲ್ಲಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡದೇ, ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನವನ್ನು ಉಪಯೋಗಿಸಿ, ಪ.ಜಾತಿ ಮತ್ತು ಪ.ಪಂಗಡದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿರುವುದು ಕಂಡುಬಂದಿದೆ.

ಸದರಿ ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘ(ರಿ)ದ ವಿದ್ಯಾರ್ಥಿಗಳು ನನ್ನಲ್ಲಿ ಮನವಿ ಸಲ್ಲಿಸಿರುವ ಮೇರೆಗೆ, ಈ ಬಗ್ಗೆ ನೇರವಾಗಿ ದೂರವಾಣಿ ಮೂಲಕ ಉಪ ಕುಲಪತಿಯವರಿಗೆ ಮಾತನಾಡಿ ಈ ವಿಷಯದ ಬಗ್ಗೆ ವಿದ್ಯಾರ್ಥಿಗಳ ಬಳಿ ಕೂಲಕುಂಷವಾಗಿ ಚರ್ಚಿಸಲು ನಿರ್ದೇಶನ ನೀಡಲಾಗಿದೆ. ಆದಾಗ್ಯೂ ಸಹ ಉಪ ಕುಲಪತಿಯವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ದೊರಕಬೇಕಾಗಿರುವ ಸೌಲಭ್ಯಗಳನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಪರಿಶೀಲಿಸಿ, ಉಪ ಕುಲಪತಿಯವರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಹಾಗೂ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ದೊರಕಿಸಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ತಮ್ಮನ್ನು ಈ ಮೂಲಕ ಕೋರುತ್ತೇನೆ.

ಗೌರವಗಳೊಂದಿಗೆ,

ತಮ್ಮ ನಂಬುಗೆಯ,
(ಸಹಿ)
(ಬಿ.ಹರ್ಷವರ್ಧನ್)

#91, "ಹಿಮ ಸದನ", 7ನೇ ಮುಖ್ಯ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು-570 012.

Scanned with CamScanner

ಬಿ. ಹರ್ಷವರ್ಧನ್, BE (IEM) PGDEBM
ಶಾಸಕರು
ನಂಜನಗೂಡು ವಿಧಾನಸಭಾ ಕ್ಷೇತ್ರ
ಮೈಸೂರು ಜಿಲ್ಲೆ

'ಶಾಸಕರ ಭವನ-4'
ಕೊಠಡಿ ಸಂಖ್ಯೆ : 437, ಬೆಂಗಳೂರು
ಫೋನ್ : 0821-2511533
ಮೊ.ಸಂ. : 99010 99955, 99800 99955
ಇಮೇಲ್ : harshavardhanbjp@gmail.com

ದಿನಾಂಕ:02.09.2021

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೇ,

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿಶೇಷ ಘಟಕದ ಯೋಜನೆ ಮೂಲಕ ಪ್ರತಿ ವರ್ಷ ಕೇವಲ 20 ಎಸ್.ಸಿ / ಎಸ್.ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗುತ್ತಿದ್ದು, ಉಳಿದ ಸಂಶೋಧನಾ ವಿದ್ಯಾರ್ಥಿಗಳು ಶಿಷ್ಯವೇತನದಿಂದ ವಂಚಿತರಾಗಿ ತಮ್ಮ ಸಂಶೋಧನೆಯನ್ನು ಮುಂದುವರೆಸಲು ಕಷ್ಟವಾಗುತ್ತಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ತಮ್ಮ ಸ್ವಂತ ಹಣದಲ್ಲಿ ಮಾರ್ಗದರ್ಶಕರನ್ನು ನಿಯೋಜಿಸಿಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿದ್ದರೂ, ಈ ಕಾರ್ಯಕ್ಕೆ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಯವರು ಅಡಚಣೆ ಉಂಟುಮಾಡುತ್ತಿದ್ದಾರೆ ಹಾಗೂ ಎಸ್.ಸಿ.ಪಿ/ಟಿ.ಎಸ್.ಪಿ ವಿಶೇಷ ಘಟಕ ಯೋಜನೆಯಲ್ಲಿ ಮಂಜೂರಾದ ಅನುದಾನದಲ್ಲಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡದೇ, ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನವನ್ನು ಉಪಯೋಗಿಸಿ, ಪ.ಜಾತಿ ಮತ್ತು ಪ.ಪಂಗಡದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿರುವುದು ಕಂಡುಬಂದಿದೆ.

ಸದರಿ ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘ(ರಿ)ದ ವಿದ್ಯಾರ್ಥಿಗಳು ನನ್ನಲ್ಲಿ ಮನವಿ ಸಲ್ಲಿಸಿರುವ ಮೇರೆಗೆ, ಈ ಬಗ್ಗೆ ನೇರವಾಗಿ ದೂರವಾಣಿ ಮೂಲಕ ಉಪ ಕುಲಪತಿಯವರಿಗೆ ಮಾತನಾಡಿ ಈ ವಿಷಯದ ಬಗ್ಗೆ ವಿದ್ಯಾರ್ಥಿಗಳ ಬಳಿ ಕೂಲಂಕುಷವಾಗಿ ಚರ್ಚಿಸಲು ನಿರ್ದೇಶನ ನೀಡಲಾಗಿದೆ. ಆದಾಗ್ಯೂ ಸಹ ಉಪ ಕುಲಪತಿಯವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ದೊರಕಬೇಕಾಗಿರುವ ಸೌಲಭ್ಯಗಳನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಪರಿಶೀಲಿಸಿ, ಉಪ ಕುಲಪತಿಯವರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಹಾಗೂ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ದೊರಕಿಸಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ತಮ್ಮನ್ನು ಈ ಮೂಲಕ ಕೋರುತ್ತೇನೆ.

ಗೌರವಗಳೊಂದಿಗೆ,

ತಮ್ಮ ನಂಬುಗೆಯ,
(ಸಹಿ)
(ಬಿ.ಹರ್ಷವರ್ಧನ್)



Scanned with CamScanner

**ಬಿ. ಹರ್ಷವರ್ಧನ್, BE (IEM) PGDEBM**
ಶಾಸಕರು
ನಂಜನಗೂಡು ವಿಧಾನಸಭಾ ಕ್ಷೇತ್ರ
ಮೈಸೂರು ಜಿಲ್ಲೆ

'ಶಾಸಕರ ಭವನ-4'
ಕೊಠಡಿ ಸಂಖ್ಯೆ : 437, ಬೆಂಗಳೂರು
ಫೋನ್ : 0821-2511533
ಮೊ.ಸಂ. : 99010 99955, 99800 99955
ಇಮೇಲ್ : harshavardhanbjp@gmail.com

ದಿನಾಂಕ:02.09.2021

ಮಾನ್ಯ ಎಂ.ಪಿ.ಕುಮಾರಸ್ವಾಮಿ ರವರು
ಅಧ್ಯಕ್ಷರು, ಅನುಸೂಚಿತ ಜಾತಿ ಮತ್ತು
ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ
ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿಶೇಷ ಘಟಕದ ಯೋಜನೆ ಮೂಲಕ ಪ್ರತಿ ವರ್ಷ ಕೇವಲ 20 ಎಸ್.ಸಿ / ಎಸ್.ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗುತ್ತಿದ್ದು, ಉಳಿದ ಸಂಶೋಧನಾ ವಿದ್ಯಾರ್ಥಿಗಳು ಶಿಷ್ಯವೇತನದಿಂದ ವಂಚಿತರಾಗಿ ತಮ್ಮ ಸಂಶೋಧನೆಯನ್ನು ಮುಂದುವರೆಸಲು ಕಷ್ಟವಾಗುತ್ತಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ತಮ್ಮ ಸ್ವಂತ ಹಣದಲ್ಲಿ ಮಾರ್ಗದರ್ಶಕರನ್ನು ನಿಯೋಜಿಸಿಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿದ್ದರೂ, ಈ ಕಾರ್ಯಕ್ಕೂ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಯವರು ಅಡಚಣೆ ಉಂಟುಮಾಡುತ್ತಿದ್ದಾರೆ ಹಾಗೂ ಎಸ್.ಸಿ.ಪಿ/ಟಿ.ಎಸ್.ಪಿ ವಿಶೇಷ ಘಟಕ ಯೋಜನೆಯಲ್ಲಿ ಮಂಜೂರಾದ ಅನುದಾನದಲ್ಲಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡದೇ, ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನವನ್ನು ಉಪಯೋಗಿಸಿ, ಪ.ಜಾತಿ ಮತ್ತು ಪ.ಪಂಗಡದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿರುವುದು ಕಂಡುಬಂದಿದೆ.

ಸದರಿ ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘ(ರಿ)ದ ವಿದ್ಯಾರ್ಥಿಗಳು ನನ್ನಲ್ಲಿ ಮನವಿ ಸಲ್ಲಿಸಿರುವ ಮೇರೆಗೆ, ಈ ಬಗ್ಗೆ ನೇರವಾಗಿ ದೂರವಾಣಿ ಮೂಲಕ ಉಪ ಕುಲಪತಿಯವರಿಗೆ ಮಾತನಾಡಿ ಈ ವಿಷಯದ ಬಗ್ಗೆ ವಿದ್ಯಾರ್ಥಿಗಳ ಬಳಿ ಕೂಲಂಕುಷವಾಗಿ ಚರ್ಚಿಸಲು ನಿರ್ದೇಶನ ನೀಡಲಾಗಿದೆ. ಆದಾಗ್ಯೂ ಸಹ ಉಪ ಕುಲಪತಿಯವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ದೊರಕಬೇಕಾಗಿರುವ ಸೌಲಭ್ಯಗಳನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಪರಿಶೀಲಿಸಿ, ಉಪ ಕುಲಪತಿಯವರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಹಾಗೂ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ದೊರಕಿಸಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ತಮ್ಮನ್ನು ಈ ಮೂಲಕ ಕೋರುತ್ತೇನೆ.

ಗೌರವಗಳೊಂದಿಗೆ,


ತಮ್ಮ ನಂಬುಗೆಯ,

(ಬಿ.ಹರ್ಷವರ್ಧನ್)

#91, "ಭೀಮ ಸದನ", 7ನೇ ಮುಖ್ಯ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು-570 012.

Scanned with CamScanner

# ಪರಿಶಿಷ್ಟರ ಪಿಎಚ್‌ಡಿ ಶಿಷ್ಯವೇತನ ವಿಸ್ತರಿಸಿ



ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಘಟಕ ಯೋಜನೆ ಮೂಲಕ ಸಂಶೋಧಕರಿಗೆ ನೀಡಲಾಗುತ್ತಿರುವ ಶಿಷ್ಯ ವೇತನದ ಸಂಖ್ಯೆಯನ್ನು ಹೆಚ್ಚಳ ಮಾಡುವಂತೆ ವಿಧಾನಸಭೆ ಎಸ್‌ಸಿ ಎಸ್‌ಟಿ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ.ಕುಮಾರಸ್ವಾಮಿ ಅವರಿಗೆ ಶಾಸಕ ಬಿ.ಹರ್ಷವರ್ಧನ್ ಮನವಿ ಸಲ್ಲಿಸಿದರು.

■ ವಿಕ ಸುದ್ದಿಲೋಕ ನಂಜನಗೂಡು

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶೇಷ ಘಟಕ ಯೋಜನೆ ಮೂಲಕ 20 ಮಂದಿಗೆ ಶಿಷ್ಯ ವೇತನ ನೀಡಲಾಗುತ್ತಿದ್ದು, ಈ ಪ್ರಮಾಣವನ್ನು ಹೆಚ್ಚಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಶಾಸಕ ಬಿ.ಹರ್ಷವರ್ಧನ್, ರಾಜ್ಯ ವಿಧಾನಸಭೆಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ.ಕುಮಾರಸ್ವಾಮಿಯವರಿಗೆ ಗುರುವಾರ ಮನವಿ ಸಲ್ಲಿಸಿದರು.

**ಶೀಘ್ರವೇ ಮೈಸೂರಿನಲ್ಲಿ ಎಸ್‌ಸಿ ಎಸ್‌ಟಿ ಕಲ್ಯಾಣ ಸಮಿತಿ ಸಭೆ | ಅಧ್ಯಕ್ಷ ಎಂ.ಪಿ.ಕುಮಾರಸ್ವಾಮಿ ಭರವಸೆ**

ಮೈಸೂರು ವಿವಿಯಲ್ಲಿ ವಿಶೇಷ ಘಟಕ ಯೋಜನೆ ಮೂಲಕ ಪ್ರತೀ ವರ್ಷ ಎಸ್‌ಸಿ ಹಾಗೂ ಎಸ್‌ಟಿ ಸಮುದಾಯದ 20 ಮಂದಿ ಸಂಶೋಧಕರಿಗೆ ಮಾತ್ರ ಶಿಷ್ಯ ವೇತನ ನೀಡಲಾಗುತ್ತಿದ್ದು, ಉಳಿದವರು ತಮ್ಮ ಸಂಶೋಧನೆಯನ್ನು ಮುಂದುವರಿಸಲು ಕಷ್ಟವಾಗುತ್ತಿದೆ. ಇನ್ನು ಮೈಸೂರು ವಿವಿಯಲ್ಲಿ ವಿಶೇಷ ಘಟಕ ಯೋಜನೆ ಮೂಲಕ ಮಂಜೂರಾದ ಅನುದಾನವನ್ನು ವಿದ್ಯಾರ್ಥಿಗಳಿಗೆ ಶಿಷ್ಯ ವೇತನವಾಗಿ ನೀಡದೆ ವಿವಿ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಲಾಗುತ್ತಿದೆ ಎಂಬ ದೂರುಗಳು ಕೇಳಿ ಬಂದಿದೆ. ಈ ಸಂಬಂಧ ವಿಶ್ವವಿದ್ಯಾಲಯದ ಸಂಶೋಧಕರ ಸಂಘದ ವಿದ್ಯಾರ್ಥಿಗಳು ಸಹಾ ದೂರಿದ್ದಾರೆ. ಎಲ್ಲಾ ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡಲು ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಿಸಿದವರಿಗೆ ಸೂಚನೆ ನೀಡುವಂತೆ ಮನವಿ ಮಾಡಿದರು.

ಈ ವೇಳೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ.ಕುಮಾರಸ್ವಾಮಿ ಶಾಸಕರ ಮನವಿ ಸ್ವೀಕರಿಸಿ, ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತ್‌ಕುಮಾರ್ ಜತೆ ದೂರವಾಣಿ ಮೂಲಕ ಮಾತನಾಡಿ, ವಿಶೇಷ ಘಟಕ ಯೋಜನೆಯ ಅನುದಾನವನ್ನು ಕಟ್ಟಡ ನಿರ್ಮಾಣದಂತಹ ಕಾಮಗಾರಿಗಳಿಗೆ ವಿನಿಯೋಗಿಸದೆ ಎಸ್‌ಸಿ ಹಾಗೂ ಎಸ್‌ಟಿ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ವ್ಯಾಸಂಗಕ್ಕೆ ನೆರವಾಗಲು ಬಳಸಿಕೊಳ್ಳುವಂತೆ ಸೂಚನೆ ನೀಡಿದರು. ಜೊತೆಗೆ ಶೀಘ್ರ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಸಭೆಯನ್ನು ಮೈಸೂರಿನಲ್ಲಿ ಆಯೋಜಿಸುವ ಮೂಲಕ ಸ್ಥಳೀಯವಾಗಿ ವಿದ್ಯಾರ್ಥಿಗಳ ಕುಂದುಕೊರತೆಯನ್ನು ನಿವಾರಿಸುವುದಾಗಿ," ತಿಳಿಸಿದರು.


Scanned with CamScanner

-162-

## ಮೈಸೂರು ವಿವಿ ಎಸ್‌ಸಿ, ಎಸ್‌ಟಿ ಸಂಶೋಧನಾ

# ವಿದ್ಯಾರ್ಥಿಗಳ ಫೆಲೋಶಿಪ್ ಹೆಚ್ಚಳಕ್ಕೆ ಒತ್ತಾಯ

ನಂಜನಗೂಡು, ಸೆ.2– ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶೇಷ ಘಟಕ ಯೋಜನೆಯಡಿ 20 ಮಂದಿಗೆ ಶಿಷ್ಯವೇತನ ನೀಡಲಾಗುತ್ತಿದ್ದು, ಈ ಪ್ರಮಾಣ ಹೆಚ್ಚಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಶಾಸಕ ಬಿ.ಹರ್ಷವರ್ಧನ್ ರಾಜ್ಯ ವಿಧಾನ ಸಭೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ.ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಿದ್ದಾರೆ.



ಮೈಸೂರು ವಿವಿಯಲ್ಲಿ ಎಸ್‌ಸಿ ಹಾಗೂ ಎಸ್‌ಟಿ ಸಮುದಾಯದ 20 ಸಂಶೋಧಕರಿಗೆ ಮಾತ್ರ ಶಿಷ್ಯವೇತನ ನೀಡಲಾಗುತ್ತಿದೆ. ಇದರಿಂದ ಉಳಿದವರು ತಮ್ಮ ಸಂಶೋಧನೆ ಮುಂದುವರೆಸಲು ಕಷ್ಟವಾಗುತ್ತಿದೆ. ಇನ್ನು ಮೈಸೂರು ವಿವಿಯಲ್ಲಿ ವಿಶೇಷ ಘಟಕ ಯೋಜನೆ ಮೂಲಕ ಮಂಜೂರಾದ ಅನುದಾನವನ್ನು ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡದೆ ವಿವಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಲಾಗುತ್ತಿದೆ ಎಂಬ ದೂರುಗಳು ಕೇಳಿ ಬಂದಿದ್ದು, ಈ ಸಂಬಂಧ ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದ ವಿದ್ಯಾರ್ಥಿಗಳು ಸಹ ದೂರಿದ್ದಾರೆ. ಹೀಗಾಗಿ ಮೈಸೂರು ವಿವಿಯಲ್ಲಿ ಸಂಶೋಧನೆಯಲ್ಲಿ ನಿರತರಾಗಿರುವ ಎಲ್ಲಾ ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲು ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಿಸಿದವರಿಗೆ ಸೂಚನೆ ನೀಡುವಂತೆ ಮನವಿ ಮಾಡಿದರು.

ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ ಮನವಿ ಸ್ವೀಕರಿಸಿ ಮೈಸೂರು ವಿವಿ ಕುಲಪತಿ ಹೇಮಂತ್‌ಕುಮಾರ್‌ರೊಡನೆ ದೂರವಾಣಿ ಮೂಲಕ ಮಾತನಾಡಿ, ವಿಶೇಷ ಘಟಕ ಯೋಜನೆ ಅನುದಾನವನ್ನು ಕಟ್ಟಡ ನಿರ್ಮಾಣದಂತಹ ಕಾಮಗಾರಿಗಳಿಗೆ ವಿನಿಯೋಗಿಸದೆ ಎಸ್‌ಸಿ ಹಾಗೂ ಎಸ್‌ಟಿ ವಿದ್ಯಾರ್ಥಿಗಳ ಶೈಕ್ಷಣಿಕ ವ್ಯಾಸಂಗಕ್ಕೆ ನೆರವಾಗಲು ಬಳಸಿಕೊಳ್ಳುವಂತೆ ಸೂಚನೆ ನೀಡಿದರು.

ಜೊತೆಗೆ ಶೀಘ್ರ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಸಭೆಯನ್ನು ಮೈಸೂರಿನಲ್ಲಿ ಆಯೋಜಿಸುವ ಮೂಲಕ ಸ್ಥಳೀಯವಾಗಿ ವಿದ್ಯಾರ್ಥಿಗಳ ಕುಂದುಕೊರತೆ ನಿವಾರಿಸುವುದಾಗಿ ತಿಳಿಸಿದರು.

Scanned with CamScanner

# ಶಿಷ್ಯ ವೇತನದ ಸಂಖ್ಯೆ ಹೆಚ್ಚಳಕ್ಕೆ ಶಾಸಕರ ಮನವಿ

• ಕನ್ನಡಪ್ರಭ ವಾರ್ತೆ ನಂಜನಗೂಡು

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಘಟಕ ಯೋಜನೆ ಮೂಲಕ ಸಂಶೋಧಕರಿಗೆನೀಡಲಾಗುತ್ತಿರುವಶಿಷ್ಯ ವೇತನದ ಸಂಖ್ಯೆಯನ್ನು ಹೆಚ್ಚಳ ಮಾಡುವಂತೆ ಪ. ಜಾತಿ ಮತ್ತು ಪಂಗಡಗಳ ಸದನ ಸಮಿತಿ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ ಅವರಿಗೆ ಶಾಸಕ ಬಿ. ಹರ್ಷವರ್ಧನ್ ಮನವಿ ಸಲ್ಲಿಸಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪ. ಜಾತಿ ಮತ್ತು ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶೇಷ ಘಟಕ ಯೋಜನೆ ಮೂಲಕ 20 ಮಂದಿಗೆ ಶಿಷ್ಯ ವೇತನ ನೀಡಲಾಗುತ್ತಿದ್ದು, ಈ ಪ್ರಮಾಣವನ್ನು ಹೆಚ್ಚಳ ಮಾಡಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಕುಮಾರಸ್ವಾಮಿ ಅವರಲ್ಲಿ ಗುರುವಾರ ಮನವಿ ಮಾಡಿದರು.

ಮೈಸೂರು ವಿವಿಯಲ್ಲಿ ವಿಶೇಷ ಘಟಕ ಯೋಜನೆ ಮೂಲಕ ಮಂಜೂರಾದ ಅನುದಾನವನ್ನು ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡದೆ ವಿವಿಯಲ್ಲಿ ಅಭಿವೃದ್ಧಿ



ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಘಟಕ ಯೋಜನೆ ಮೂಲಕ ಸಂಶೋಧಕರಿಗೆ ನೀಡಲಾಗುತ್ತಿರುವ ಶಿಷ್ಯ ವೇತನದ ಸಂಖ್ಯೆಯನ್ನು ಹೆಚ್ಚಳ ಮಾಡುವಂತೆ ಪ. ಜಾತಿ ಮತ್ತು ಪಂಗಡಗಳ ಸದನ ಸಮಿತಿ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ ಅವರಿಗೆ ಶಾಸಕ ಬಿ. ಹರ್ಷವರ್ಧನ್ ಮನವಿ ಸಲ್ಲಿಸಿದರು.

ಕಾಮಗಾರಿಗಳಿಗೆ ಬಳಸಲಾಗುತ್ತಿದೆ ಎಂಬ ದೂರುಗಳು ಕೇಳಿ ಬಂದಿದ್ದು, ಈ ಸಂಬಂಧ ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದ ವಿದ್ಯಾರ್ಥಿಗಳು ಸಹಾ ದೂರಿದ್ದಾರೆ, ಹೀಗಾಗಿ ಮೈಸೂರು ವಿವಿಯಲ್ಲಿ ಸಂಶೋಧನೆಯಲ್ಲಿ ನಿರತರಾಗಿರುವ ಎಲ್ಲ ಎಸ್ಸಿ ಮತ್ತು ಎಸ್ಟಿ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ನೀಡಲು ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಿಸಿದವರಿಗೆ ಸೂಚನೆ ನೀಡುವಂತೆ ಮನವಿ ಮಾಡಿದರು.

ಕುಮಾರಸ್ವಾಮಿ ಅವರು ಶಾಸಕರ ಮನವಿ ಸ್ವೀಕರಿಸಿ, ಮೈಸೂರು ವಿವಿ ಕುಲಪತಿ ಹೇಮಂತ್‌ಕುಮಾರ್‌ರೊಡನೆ ದೂರವಾಣಿ ಮೂಲಕ ಮಾತನಾಡಿ, ವಿಶೇಷ ಘಟಕ ಯೋಜನೆಯ ಅನುದಾನವನ್ನು ಕಟ್ಟಡ ನಿರ್ಮಾಣದಂತಹ ಕಾಮಗಾರಿಗಳಿಗೆ ವಿನಿಯೋಗಿಸದೆ ಎಸ್‌ಸಿ ಹಾಗೂ ಎಸ್‌ಟಿ ಸಮುದಾಯದ ವಿದ್ಯಾರ್ಥಿಗಳ ಶೈಕ್ಷಣಿಕ ವ್ಯಾಸಂಗಕ್ಕೆ ನೆರವಾಗಲು ಬಳಸಿಕೊಳ್ಳುವಂತೆ ಸೂಚನೆ ನೀಡಿದರು. ಜೊತೆಗೆ ಶೀಘ್ರದಲ್ಲಿಯೇ ಪ. ಜಾತಿ, ಪಂಗಡಗಳ ಕಲ್ಯಾಣ ಸಮಿತಿ ಸಭೆಯನ್ನು ಮೈಸೂರಿನಲ್ಲಿ ಆಯೋಜಿಸುವ ಮೂಲಕ ಸ್ಥಳೀಯವಾಗಿ ವಿದ್ಯಾರ್ಥಿಗಳ ಕುಂದುಕೊರತೆಯನ್ನು ನಿವಾರಿಸುವುದಾಗಿ ತಿಳಿಸಿದರು.

Scanned with CamScanner

**ಬಿ. ಹರ್ಷವರ್ಧನ್,** BE (IEM) PGDEBM
ಶಾಸಕರು -164-
ನಂಜನಗೂಡು ವಿಧಾನಸಭಾ ಕ್ಷೇತ್ರ
ಮೈಸೂರು ಜಿಲ್ಲೆ

'ಶಾಸಕರ ಭವನ-4'
ಕೊಠಡಿ ಸಂಖ್ಯೆ : 437, ಬೆಂಗಳೂರು
ಫೋನ್ : 0821-2511533
ಮೊ.ಸಂ. : 99010 99955, 99800 99955
ಇಮೇಲ್ : harshavardhanbjp@gmail.com

ದಿನಾಂಕ:02.09.2021

ಸನ್ಮಾನ್ಯ ಶ್ರೀ ಕೋಟಾ ಶ್ರೀನಿವಾಸ ಪೂಜಾರಿ ರವರು
ಮಾನ್ಯ ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು,
ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.

ಮಾನ್ಯರೇ,

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿಶೇಷ ಘಟಕದ ಯೋಜನೆ ಮೂಲಕ ಪ್ರತಿ ವರ್ಷ ಕೇವಲ 20 ಎಸ್.ಸಿ / ಎಸ್.ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗುತ್ತಿದ್ದು, ಉಳಿದ ಸಂಶೋಧನಾ ವಿದ್ಯಾರ್ಥಿಗಳು ಶಿಷ್ಯವೇತನದಿಂದ ವಂಚಿತರಾಗಿ ತಮ್ಮ ಸಂಶೋಧನೆಯನ್ನು ಮುಂದುವರೆಸಲು ಕಷ್ಟವಾಗುತ್ತಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ತಮ್ಮ ಸ್ವಂತ ಹಣದಲ್ಲಿ ಮಾರ್ಗದರ್ಶಕರನ್ನು ನಿಯೋಜಿಸಿಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿದ್ದರೂ, ಈ ಕಾರ್ಯಕ್ಕೂ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಯವರು ಅಡಚಣೆ ಉಂಟುಮಾಡುತ್ತಿದ್ದಾರೆ ಹಾಗೂ ಎಸ್.ಸಿ.ಪಿ/ಟಿ.ಎಸ್.ಪಿ ವಿಶೇಷ ಘಟಕ ಯೋಜನೆಯಲ್ಲಿ ಮಂಜೂರಾದ ಅನುದಾನದಲ್ಲಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡದೇ, ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನವನ್ನು ಉಪಯೋಗಿಸಿ, ಪ.ಜಾತಿ ಮತ್ತು ಪ.ಪಂಗಡದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿರುವುದು ಕಂಡುಬಂದಿದೆ.

ಸದರಿ ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘ(ರಿ)ದ ವಿದ್ಯಾರ್ಥಿಗಳು ನನ್ನಲ್ಲಿ ಮನವಿ ಸಲ್ಲಿಸಿರುವ ಮೇರೆಗೆ, ಈ ಬಗ್ಗೆ ನೇರವಾಗಿ ದೂರವಾಣಿ ಮೂಲಕ ಉಪ ಕುಲಪತಿಯವರಿಗೆ ಮಾತನಾಡಿ ಈ ವಿಷಯದ ಬಗ್ಗೆ ವಿದ್ಯಾರ್ಥಿಗಳ ಬಳಿ ಕೂಲಕುಂಷವಾಗಿ ಚರ್ಚಿಸಲು ನಿರ್ದೇಶನ ನೀಡಲಾಗಿದೆ. ಆದಾಗ್ಯೂ ಸಹ ಉಪ ಕುಲಪತಿಯವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ದೊರಕಬೇಕಾಗಿರುವ ಸೌಲಭ್ಯಗಳನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಪರಿಶೀಲಿಸಿ, ಉಪ ಕುಲಪತಿಯವರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಹಾಗೂ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ದೊರಕಿಸಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ತಮ್ಮನ್ನು ಈ ಮೂಲಕ ಕೋರುತ್ತೇನೆ.

ಗೌರವಗಳೊಂದಿಗೆ,

ತಮ್ಮ ನಂಬುಗೆಯ,
(ಬಿ.ಹರ್ಷವರ್ಧನ್)

#91, "ಭೀಮ ಸದನ", 7ನೇ ಮುಖ್ಯ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು-570 012.


Scanned with CamScanner

# ಎಸ್‌ಸಿ, ಎಸ್‌ಟಿ ಜಾತಿ ಪ್ರಮಾಣಪತ್ರ ಪದೇಪದೇ ಪರಿಶೀಲನೆ ಸಲ್ಲದು: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ನೀಡಲಾಗುವ ಜಾತಿ ಪ್ರಮಾಣಪತ್ರಗಳನ್ನು ಪದೇ ಪದೇ ಪರಿಶೀಲನೆಗೊಳಪಡಿಸುವುದು ಅವರಿಗೆ ಹಾನಿಕಾರಕರ. ವಿತರಿಸುವ ಪ್ರಮಾಣಪತ್ರಗಳು ಮೊದಲೇ ಪರಿಶೀಲನಾ ಸಮಿತಿಯ ಪರಿಶೀಲನೆಗೆ ಒಳಪಟ್ಟಿರಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ಅಭಿಪ್ರಾಯಪಟ್ಟಿತು.

ನಕಲಿ ಪ್ರಮಾಣಪತ್ರವನ್ನು ಪತ್ತೆ ಹಚ್ಚುವುದು ಪರಿಶೀಲನಾ ಸಮಿತಿಯ ಉದ್ದೇಶ. ಆದರೆ, ಮತ್ತೆ ಮತ್ತೆ ಪರಿಶೀಲನೆ ನಡೆಸುವುದು ಆ ಸಮುದಾಯದ ಜನರಿಗೆ ಹಾನಿಕಾರಕವಾಗಲಿದೆ. ಸಮರ್ಪಕ ಪರಿಶೀಲನೆಯಿಲ್ಲದೇ ವಿತರಿಸಲಾದ ಪ್ರಕರಣಗಳಲ್ಲಿ ಮಾತ್ರವೇ ಮರುಪರಿಶೀಲನೆ ನಡೆಸಬೇಕು ಎಂದು ನ್ಯಾಯಮೂರ್ತಿ ಎಲ್.ನಾಗೇಶ್ವರರಾವ್ ನೇತೃತ್ವದ ಪೀಠ ಹೇಳಿತು.



ತಾವು ಪರಿಶಿಷ್ಟ ಜಾತಿಗೆ ಸೇರುವ ವಲ್ಲುವನ್ ಸಮುದಾಯಕ್ಕೆ ಸೇರಿದವರು ಎಂದು 1982ರಲ್ಲಿ ನೀಡಲಾಗಿದ್ದ ಪ್ರಮಾಣಪತ್ರವನ್ನು ರದ್ದುಗೊಳಿಸಿದ್ದ ಚೆನ್ನೈನ ಜಿಲ್ಲಾ ಕಣ್ಗಾವಲು ಸಮಿತಿಯ ಆದೇಶವನ್ನು ಪ್ರಶ್ನಿಸಿ ಜೆ.ಚಿತ್ರಾ ಎಂಬುವರು ಸಲ್ಲಿಸಿದ್ದ ಮನವಿಯನ್ನು ಪೀಠವು ವಿಚಾರಣೆಗೆ ಪರಿಗಣಿಸಿತು.

ಅರ್ಜಿದಾರರು ಅಕೌಂಟೆಂಟ್ ಜನರಲ್ ಕಚೇರಿಗೆ ಸೇರ್ಪಡೆಯಾದ ಬಳಿಕ ಡಾ.ಅಂಬೇಡ್ಕರ್ ಸೇವಾ ಸಂಸ್ಥೆಯು ಅವರ ಪ್ರಮಾಣಪತ್ರದ ಅಸಲಿತನ ಕುರಿತು ಶಂಕೆ ವ್ಯಕ್ತಪಡಿಸಿ ದೂರು ಸಲ್ಲಿಸಿತ್ತು. ದೂರು ಪರಿಶೀಲಿಸಿದ ಜಿಲ್ಲಾ ಕಣ್ಗಾವಲು ಸಮಿತಿಯು ಅರ್ಜಿದಾರರು ವಲ್ಲುವನ್ ಸಮುದಾಯಕ್ಕೆ ಸೇರಿದವರು ಎಂದು ಅಭಿಪ್ರಾಯಪಟ್ಟಿತ್ತು. ನಕಲಿ ಪ್ರಮಾಣಪತ್ರ ನೀಡಿಯೇ ಹುದ್ದೆಗೆ ನೇಮಕವಾಗಿದ್ದಾರೆ ಎಂದು ಸಂಸ್ಥೆಯು ಮತ್ತೆ ರಾಜ್ಯ ಸಮಿತಿಗೆ ದೂರು ನೀಡಿದ್ದು, ಇದನ್ನು ಆಧರಿಸಿ ರಾಜ್ಯ ಕಣ್ಗಾವಲು ಸಮಿತಿಯು ಮತ್ತೆ ಜಿಲ್ಲಾ ಸಮಿತಿಗೆ ಪ್ರಕರಣವನ್ನು ಮರುಪರಿಶೀಲಿಸಲು ಒಪ್ಪಿಸಿತ್ತು. ಮತ್ತೊಮ್ಮೆ ವಿಚಾರಣೆ ನಡೆಸಿದ ಜಿಲ್ಲಾ ಸಮಿತಿ ಅಂತಿಮವಾಗಿ ಪ್ರಮಾಣಪತ್ರವನ್ನು ರದ್ದುಪಡಿಸಿತ್ತು.

ಅದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಪೀಠವು, ಒಮ್ಮೆ ಅರ್ಜಿದಾರರಿಗೆ ನೀಡಲಾದ ಪ್ರಮಾಣಪತ್ರವು ಅಂತಿಮವಾದುದು. ಈ ಪ್ರಕರಣದಲ್ಲಿ ವಿಚಾರಣೆ ನಡೆಸುವ ಯಾವುದೇ ಅಧಿಕಾರದ ವ್ಯಾಪ್ತಿಯನ್ನು ರಾಜ್ಯ ಕಣ್ಗಾವಲು ಸಮಿತಿಯು ಹೊಂದಿಲ್ಲ ಎಂದೂ ಕೋರ್ಟ್ ತಿಳಿಸಿತು.

Scanned with CamScanner

Scanned with CamScanner

-165-

-166-

ಬಿ. ಹರ್ಷವರ್ಧನ್, BE (IEM) PGDEBM
ಶಾಸಕರು
ನಂಜನಗೂಡು ವಿಧಾನಸಭಾ ಕ್ಷೇತ್ರ
ಮೈಸೂರು ಜಿಲ್ಲೆ

'ಶಾಸಕರ ಭವನ-4'
ಕೊಠಡಿ ಸಂಖ್ಯೆ : 437, ಬೆಂಗಳೂರು
ಫೋನ್ : 0821-2511533
ಮೊ.ಸಂ. : 99010 99955, 99800 99955
ಇಮೇಲ್ : harshavardhanbjp@gmail.com

ದಿನಾಂಕ:02.09.2021

ಸನ್ಮಾನ್ಯ ಶ್ರೀ ಬಿ. ಶ್ರೀರಾಮುಲು ರವರು,
ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಸಚಿವರು
ಕರ್ನಾಟಕ ಸರ್ಕಾರ, ವಿಧಾನಸೌಧ,
ಬೆಂಗಳೂರು.

ಮಾನ್ಯರೇ,

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿಶೇಷ ಘಟಕದ ಯೋಜನೆ ಮೂಲಕ ಪ್ರತಿ ವರ್ಷ ಕೇವಲ 20 ಎಸ್.ಸಿ / ಎಸ್.ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗುತ್ತಿದ್ದು, ಉಳಿದ ಸಂಶೋಧನಾ ವಿದ್ಯಾರ್ಥಿಗಳು ಶಿಷ್ಯವೇತನದಿಂದ ವಂಚಿತರಾಗಿ ತಮ್ಮ ಸಂಶೋಧನೆಯನ್ನು ಮುಂದುವರೆಸಲು ಕಷ್ಟವಾಗುತ್ತಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳು ಸ್ವಯಂಪ್ರೇರಿತವಾಗಿ ತಮ್ಮ ಸ್ವಂತ ಹಣದಲ್ಲಿ ಮಾರ್ಗದರ್ಶಕರನ್ನು ನಿಯೋಜಿಸಿಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿದ್ದರೂ, ಈ ಕಾರ್ಯಕ್ಕೂ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಯವರು ಅಡಚಣೆ ಉಂಟುಮಾಡುತ್ತಿದ್ದಾರೆ ಹಾಗೂ ಎಸ್.ಸಿ.ಪಿ/ಟಿ.ಎಸ್.ಪಿ ವಿಶೇಷ ಘಟಕ ಯೋಜನೆಯಲ್ಲಿ ಮಂಜೂರಾದ ಅನುದಾನದಲ್ಲಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡದೇ, ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನವನ್ನು ಉಪಯೋಗಿಸಿ, ಪ.ಜಾತಿ ಮತ್ತು ಪ.ಪಂಗಡದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿರುವುದು ಕಂಡುಬಂದಿದೆ.

ಸದರಿ ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘ(ರಿ)ದ ವಿದ್ಯಾರ್ಥಿಗಳು ನನ್ನಲ್ಲಿ ಮನವಿ ಸಲ್ಲಿಸಿರುವ ಮೇರೆಗೆ, ಈ ಬಗ್ಗೆ ನೇರವಾಗಿ ದೂರವಾಣಿ ಮೂಲಕ ಉಪ ಕುಲಪತಿಯವರಿಗೆ ಮಾತನಾಡಿ ಈ ವಿಷಯದ ಬಗ್ಗೆ ವಿದ್ಯಾರ್ಥಿಗಳ ಬಳಿ ಕೂಲಕುಂಷವಾಗಿ ಚರ್ಚಿಸಲು ನಿರ್ದೇಶನ ನೀಡಲಾಗಿದೆ. ಆದಾಗ್ಯೂ ಸಹ ಉಪ ಕುಲಪತಿಯವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ದೊರಕಬೇಕಾಗಿರುವ ಸೌಲಭ್ಯಗಳನ್ನು ನೀಡುವಲ್ಲಿ ವಿಫಲರಾಗಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಪರಿಶೀಲಿಸಿ, ಉಪ ಕುಲಪತಿಯವರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಹಾಗೂ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ದೊರಕಿಸಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕೆಂದು ತಮ್ಮನ್ನು ಈ ಮೂಲಕ ಕೋರುತ್ತೇನೆ.

ಗೌರವಗಳೊಂದಿಗೆ,

ತಮ್ಮ ನಂಬುಗೆಯ,
(ಬಿ.ಹರ್ಷವರ್ಧನ್)



Scanned with CamScanner

ಶಿಕ್ಷಣ　　　　　　　　　　　　ಸಂಘಟನೆ　　　　　　　　　　　　ಹೋರಾಟ



# ಸಂಶೋಧಕರ ಸಂಘ (ರಿ.)



ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

| ಅಧ್ಯಕ್ಷರು | ಗೌರವ ಅಧ್ಯಕ್ಷರು | ಪ್ರಧಾನ ಕಾರ್ಯದರ್ಶಿ |
|---|---|---|
| ಸಾಹೇಬ್ ಹೊಸಮನೆ | ಗುರುಮೂರ್ತಿ ಎಂ. | ಸಂದೀಪ್ ಎಸ್. ರಾವಣೀಕರ್ |
| 97415 18424 | 80958 21662 | 78359 67476 |

**ಉಪಾಧ್ಯಕ್ಷರು**
ಶಿವಕುಮಾರ್
ಶಿವಕುಮಾರ್ ಡಿ.ಕೆ.
ನಟರಾಜ್ ಶಿವಣ್ಣ

**ಜಂಟಿ ಕಾರ್ಯದರ್ಶಿಗಳು**
ರಘು ಬಿ.ಎಲ್.
ಸಿದ್ಧಪ್ಪಾಜಿ

**ಖಜಾಂಚಿ**
ರಮೇಶ್ ಕೆ.ಪಿ.

**ಸಹ ಕಾರ್ಯದರ್ಶಿಗಳು**
ಶಿವು
ಬಸವರಾಜು

**ಸಂಘಟನಾ ಕಾರ್ಯದರ್ಶಿಗಳು**
ಸಂದೇಶ್ ಎಸ್.
ಕಾರ್ತಿಕ್ ಟಿ.ಎಂ.
ಪ್ರದೀಪ್ ರಾಜ್
ಮಾರುತಿ ನಡುವಿಮನೆ
ಚಂದ್ರು ಚಹುಟಿ

**ಮಾಧ್ಯಮ ಸಲಹೆಗಾರರು**
ಸಂಜಯ್

**ಸಾಂಸ್ಕೃತಿಕ ಕಾರ್ಯದರ್ಶಿಗಳು**
ಅಮ್ಮ ರಾಮಚಂದ್ರ
ಸುಂದರೇಶ್
ಆನಂದ ಕೆ.ಎಂ.

ಕ್ರ.ಸಂ.　　　　　　　　　　　　ದಿನಾಂಕ: ..................

**ಗೆ,**

ಗೌರವಾನ್ವಿತ ಕುಲಪತಿರವರಿಗೆ
ಮೈಸೂರು ವಿಶ್ವವಿದ್ಯಾನಿಲಯ
ಕ್ರಾಫರ್ಡ್ ಭವನ, ಮೈಸೂರು–05

**ಮಾನ್ಯರೇ,**

**ವಿಷಯ:** ಪ.ಜಾತಿ/ಪ.ಪಂ. ಘಟಕದಿಂದ ಶಿಷ್ಯವೇತನಕ್ಕೆ ಅರ್ಜಿ ಆಹ್ವಾನಿಸಿರುವ ಅಧಿಸೂಚನೆಯಲ್ಲಿ ತಾತ್ಕಾಲಿಕ ನೋಂದಣಿಯ ದಿನಾಂಕವನ್ನು ಸಡಿಲಿಕೆಗೊಳಿಸುವದರ ಬಗ್ಗೆ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 18.08.2021ರಂದು ಮೈಸೂರು ವಿಶ್ವವಿದ್ಯಾನಿಲಯವು ಪ.ಜಾತಿ/ಪ.ಪಂ. ಘಟಕದಿಂದ ಸಂಶೋಧನಾ ಶಿಷ್ಯವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದ್ದು ಅರ್ಜಿಯ ಕೊನೆಯ ದಿನಾಂಕವನ್ನು 20.09.2021ರಂದು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಈ ಅಧಿಸೂಚನೆಯಲ್ಲಿ 17.08.2021ರ ಒಳಗೆ ಪಿಹೆಚ್.ಡಿ ತಾತ್ಕಾಲಿಕ ನೋಂದಣಿಯಾಗಿರುವವರು ಮಾತ್ರ ಅರ್ಜಿ ಸಲ್ಲಿಸಬೇಕೆಂದು ತಿಳಿಸಲಾಗಿರುತ್ತದೆ. ಆದರೆ ಈ ಸಂದರ್ಭದಲ್ಲಿ ಕೋವಿಡ್–19, ನ್ಯಾಕ್ ಕಮಿಟಿ ಹಾಗೂ ವಿಶ್ವವಿದ್ಯಾನಿಲಯದ ಘಟಿಕೋತ್ಸವ, ಈ ಹಲವು ಕಾರಣದಿಂದ ಕೆಲವು ಸಂಶೋಧನಾ ವಿದ್ಯಾರ್ಥಿಗಳ ಪಿಹೆಚ್.ಡಿ ತಾತ್ಕಾಲಿಕ ನೋಂದಣಿಯು ತಡವಾಗಿ ಬಂದಿರುತ್ತದೆ. ಆದರೆ ಇವರುಗಳು ಅರ್ಜಿಸಲ್ಲಿಸಲು ಕೊನೆಯ ದಿನಾಂಕವಾದ 20.09.2021ರ ಒಳಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ವಿಶ್ವವಿದ್ಯಾನಿಲಯವು ಅಧಿಸೂಚನೆಯಲ್ಲಿ ಹೊರಡಿಸಿರುವ ತಾತ್ಕಾಲಿಕ ನೋಂದಣಿಯ ಕೊನೆಯ ದಿನಾಂಕವನ್ನು ಸಡಿಲಗೊಳಿಸಿ, ಅರ್ಜಿಸಲ್ಲಿಸಿರುವ ಎಲ್ಲಾ ಸಂಶೋಧನಾ ವಿದರ್ಾಥಿಗಳನ್ನು ಶಿಷ್ಯವೇತನ ಆಯ್ಕೆ ಪ್ರಕ್ರಿಯೆಯಲ್ಲಿ ಪರಿಗಣಿಸಬೇಕೆಂದು ಈ ಮೂಲಕ ಗೌರವ ಪೂರ್ವಕವಾಗಿ ವಿನಂತಿಸಿಕೊಳ್ಳುತ್ತೇವೆ.

ವಂದನೆಗಳೊಂದಿಗೆ.

ಅಧ್ಯಕ್ಷರು

ಸ್ಥಳ: ಮೈಸೂರು
ದಿನಾಂಕ: 18.10.2021

-168-

# ಕರ್ನಾಟಕ ರಾಜ್ಯ ಸಂಶೋಧಕರ ಸಂಘ

## ಬೆಂಗಳೂರು


ರಾಜ್ಯಾಧ್ಯಕ್ಷರು
**ಮರಿದೇವಯ್ಯ ಎಸ್.**
ಎಂ.ಎ., ಬಿ.ಇಡ್., (ಪಿಹೆಚ್‌ಡಿ)
ಮೈಸೂರು ವಿಶ್ವವಿದ್ಯಾನಿಲಯ
ಮೊ. : 9343191722

ಗೌರವಾಧ್ಯಕ್ಷರು
**ಸಂತೋಷ್** ಎಂ.ಎಸ್ಸಿ., (ಪಿಹೆಚ್‌ಡಿ)
ಮಂಗಳೂರು ವಿಶ್ವವಿದ್ಯಾನಿಲಯ

ಉಪಾಧ್ಯಕ್ಷರು
**ಮಿಲಿಂದ ಸುಳ್ಯಾದ್** ಎಂ.ಎ., (ಪಿಹೆಚ್‌ಡಿ)
ಗುಲ್ಬರ್ಗ ವಿಶ್ವವಿದ್ಯಾನಿಲಯ

ಕಾರ್ಯದರ್ಶಿ
**ಜಿ.ಎನ್. ಕಿರಣ್** ಎಂ.ಎ.,(ಪಿಹೆಚ್‌ಡಿ)
ಮೈಸೂರು ವಿಶ್ವವಿದ್ಯಾನಿಲಯ


ಗೆ

ಕುಲಪತಿಯವರಿಗೆ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

27/10/2021

ಮಾನ್ಯರೇ

ವಿಷಯ: 2021–22 ನೇ ಸಾಲಿನಲ್ಲಿ ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಎಲ್ಲಾ ಸಂಶೋದನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಬೇಕೆಂದು ಕೋರಿ.

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರು ವಿಶ್ವವಿದ್ಯಾನಿಲಯವು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲು ಅರ್ಜಿಯನ್ನು ಆಹ್ವಾನಿಸಿತು, ಅರ್ಜಿಸಲ್ಲಿಸಲು ದಿನಾಂಕ 20/09/2021ರಂದು ಕಡೆ ದಿನವಾಗಿತ್ತು, ಕಡೆಯ ದಿನದ ಒಳಗೆ (Registration) ನೊಂದಣಿಯನ್ನು ಮಾಡಿಸಿಕೊಂಡು ಅರ್ಜಿ ಸಲ್ಲಿಸಿರುವ ಸಂಶೋಧನಾ ವಿದ್ಯಾರ್ಥಿಗಳ ಸಂಖ್ಯೆ ಸರಿಸುಮಾರು 110 ಎಂದು ತಿಳಿದುಬಂದಿದೆ, ಹಾಗಾಗಿ ಅರ್ಜಿ ಸಲ್ಲಿಸಿರುವ ಎಲ್ಲರಿಗೂ ಶಿಷ್ಯವೇತನವನ್ನು ನೀಡಬೇಕೆಂದು ಕೋರುತ್ತೇನೆ, ಏಕೆಂದರೆ ಪ್ರಸ್ತುತ ಕೋವಿಡ್ ಸಂಕಷ್ಟದಿಂದ ಸಂಶೋಧನೆ ಮಾಡಲು ವಿದ್ಯಾರ್ಥಿಗಳಿಗೆ ಆರ್ಥಿಕ ಸಂಕಷ್ಟ ಎದುರಾಗಿದ್ದು ಸಂಶೋಧನೆಯನ್ನು ಅರ್ಧಕ್ಕೆ ನಿಲ್ಲಿಸುವ ಸಂಭವ ಹೆಚ್ಚಾಗುತ್ತಿದೆ, ಅರ್ಜಿ ಸಲ್ಲಿಸಿ ಒಂದು ತಿಂಗಳು ಕಳೆದರೂ ಕೂಡ ಇನ್ನೂ ಶಿಷ್ಯವೇತನ ನೀಡದಿರುವುದು ಸಂಶೋಧನಾ ವಿದ್ಯಾರ್ಥಿಗಳಿಗೆ ಆತಂಕವನ್ನುಂಟು ಮಾಡಿದೆ, ದಯಮಾಡಿ ಅರ್ಜಿ ಸಲ್ಲಿಸಿರುವ ಎಲ್ಲರಿಗೂ ಆದಷ್ಟು ಬೇಗ ಶಿಷ್ಯವೇತನ ನೀಡಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಗೌರವಪೂರ್ವಕ ವಂದನೆಗಳೊಂದಿಗೆ

Marideviah. S

ರಾಜ್ಯಾಧ್ಯಕ್ಷರು
ಕರ್ನಾಟಕ ರಾಜ್ಯ ಸಂಶೋಧಕರ ಸಂಘ (ರಿ.)

ಕರ್ನಾಟಕ ರಾಜ್ಯ ಸಂಶೋಧಕರ ಸಂಘ (ರಿ)
ನಂ. 018
ದಿ. 21/10/2021

DR (SC/ST cell)
28/10/21

21/10/21

DR C-8
28-10-21

Deputy Registrar, Special Cell for SC/ST
No. 1255
Date 28/10/2021

ಮೈಸೂರು ವಿಶ್ವವಿದ್ಯಾನಿಲಯ
ಸಂ. 876
26/10/21

-169-

# ಮೈಸೂರು ವಿಶ್ವವಿದ್ಯಾನಿಲಯ

(4.0 ಸ್ಕೇಲ್‌ನ 3.47 ಸಿಜಿಪಿ 'ಎ' ಗ್ರೇಡ್‌ನೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)
(ಎನ್‌ಐಆರ್‌ಎಫ್–2021 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 19ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 34ನೇ ಸ್ಥಾನ)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ
ಮೈಸೂರು – 570 005

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದಿಂದ 2021–22ನೇ ಸಾಲಿಗೆ ಪಿಹೆಚ್.ಡಿ. ಸಂಶೋಧನಾ ಶಿಷ್ಯವೇತನಕ್ಕೆ ಆಯ್ಕೆ ಮಾಡುವ ಸಂಬಂಧದ ನಡಾವಳಿ:**

**2021–22ನೇ ಸಾಲಿಗೆ ಶಿಷ್ಯವೇತನಕ್ಕಾಗಿ ಆಯ್ಕೆ ಮಾಡುವ ಸಂಬಂಧ ದಿನಾಂಕ: 07.12.2021 ರಂದು 11.00 ಗಂಟೆಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಕ್ರಾಫರ್ಡ್ ಭವನದ ಶೈಕ್ಷಣಿಕ ಮಂಡಳಿ ಸಭಾಂಗಣದಲ್ಲಿ ನಡೆದ ಆಯ್ಕೆ ಸಮಿತಿಯಲ್ಲಿ ಚರ್ಚಿಸಲಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ವತಿಯಿಂದ 2021–22ನೇ ಸಾಲಿಗೆ 20 ಪಿಹೆಚ್.ಡಿ. ಶಿಷ್ಯವೇತನಕ್ಕಾಗಿ ದಿ: 17.08.2021 ರಂದು ಅಧಿಸೂಚನೆ ಹೊರಡಿಸಿ ದಿ: 20.09.2021 ರಂದು ಕೊನೆಯ ದಿನಾಂಕವಾಗಿತ್ತು. ಆದರೆ ನಂಜನಗೂಡು ವಿಧಾನ ಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ಹರ್ಷವರ್ಧನ್ ರವರು ಮತ್ತು ವಿವಿಧ ವಿಧ್ಯಾರ್ಥಿ ಸಂಘಟನೆಗಳು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ವಿಸ್ತರಿಸಿ ಹಾಗೂ ಎಲ್ಲರಿಗೂ ಶಿಷ್ಯವೇತನ ನೀಡುವಂತೆ ಮನವಿ ಮಾಡಿದ್ದು ಈ ಸಂಬಂಧ ನಡೆದ ಸಭೆಯ ನಡಾವಳಿ.**

**ಹಾಜರಿದ್ದ ಸದಸ್ಯರು:**

1. ಮಾನ್ಯ ಕುಲಪತಿಗಳು – ಅಧ್ಯಕ್ಷರು
   ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2. ಕುಲಸಚಿವರು – ಸದಸ್ಯರು
   ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
3. ಕುಲಸಚಿವ (ಪರೀಕ್ಷಾಂಗ) – ಸದಸ್ಯರು
   ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4. ಹಣಕಾಸು ಅಧಿಕಾರಿಗಳು – ಸದಸ್ಯರು
   ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
5. ಡಾ. ಎಂ.ಎಸ್. ದಾಮೋದರ್ – ಸದಸ್ಯರು
   C/O ಬಿ.ಆರ್. ಜಗನ್ನಾಥ್
   # 184/1, 4 ಕ್ರಾಸ್, ನಿಮಿಷಾಂಭನಗರ
   ಕುವೆಂಪುನಗರ ಪೋಸ್ಟ್, ಮೈಸೂರು
6. ಶ್ರೀಮತಿ. ವೈ.ಕೆ. ಪವಿತ್ರ – ಸದಸ್ಯರು
   ಸಿಂಡಿಕೇಟ್ ಸದಸ್ಯರು
   ನಂ. 21, 'ಸಿ' ಬ್ಲಾಕ್, 3ನೇ ಹಂತ, ವಿಜಯನಗರ, ಮೈಸೂರು
7. ಜಂಟಿ ನಿರ್ದೇಶಕರು – ಸದಸ್ಯರು
   ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ
   ಮೈಸೂರು

-170-

8. ಜಂಟಿ ನಿರ್ದೇಶಕರು - ಸದಸ್ಯರು
ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ
ಡಾ. ಬಾಬು ಜಗಜೀವನ್ ರಾಂ ಭವನ
ಪಡುವಾರಹಳ್ಳಿ ಮೈಸೂರು

9. ಆಡಳಿತಾಧಿಕಾರಿಗಳು - ಸದಸ್ಯರು
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

10. ನಿರ್ದೇಶಕರು - ಸದಸ್ಯರು
ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

11. ನಿರ್ದೇಶಕರು - ಸದಸ್ಯರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

12. ಪ್ರೊ. ಡಿ. ಆನಂದ್ - ಸದಸ್ಯರು
ಪ್ರಾಧ್ಯಾಪಕರು, ವ್ಯವಹಾರ ಮತ್ತು ಆಡಳಿತ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು

13. ಪ್ರೊ. ಜಿ. ಆರ್. ಜನಾರ್ಧನ್ - ಸದಸ್ಯರು
ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು

14. ಸಂಯೋಜನಾಧಿಕಾರಿಗಳು - ಸದಸ್ಯರು
ಸಂಶೋಧನಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

15. ಡಾ. ಎಸ್. ಮಹದೇವ ಮೂರ್ತಿ - ಸದಸ್ಯ ಕಾರ್ಯದರ್ಶಿ
ಉಪಕುಲಸಚಿವರು
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕದ ಉಪಕುಲಸಚಿವರಾದ ಡಾ. ಎಸ್. ಮಹದೇವ ಮೂರ್ತಿ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು, ನಂತರ 2021-22ನೇ ಸಾಲಿಗೆ 20 ಪಿಹೆಚ್.ಡಿ. ಶಿಷ್ಯವೇತನಕ್ಕಾಗಿ ದಿ: 17.08.2021 ರಂದು ಅಧಿಸೂಚನೆ ಹೊರಡಿಸಿ ದಿ: 20.09.2021 ರಂದು ಕೊನೆಯ ದಿನಾಂಕವಾಗಿತ್ತು. ಅಂದಿನವರೆಗೆ ಬಂದಿದ್ದ 113 ಅರ್ಜಿಗಳನ್ನು ಆಯ್ಕೆ ಸಮಿತಿಯ ಸದಸ್ಯರು ಕೂಲಂಕುಷವಾಗಿ ಪರಿಶೀಲಿಸಿದಾಗ 83 ಅರ್ಜಿಗಳು ಸರಿಯಾದ ಕ್ರಮದಲ್ಲಿರುತ್ತವೆ, 15 ಅರ್ಜಿಗಳ ಸಂಶೋಧಕರು ಹೊರಗಿನ ವಿಶ್ವವಿದ್ಯಾನಿಲಯದ ಪದವಿ ಪಡೆದು ಮೈಸೂರು ವಿಶ್ವವಿದ್ಯಾನಿಲಯದ ಮಾರ್ಗದರ್ಶಕರ ಅಡಿಯಲ್ಲಿ ತಾತ್ಕಾಲಿಕ ನೋಂದಣಿ ಪಡೆದಿರುತ್ತಾರೆ, 09 ಅರ್ಜಿಯ ಸಂಶೋಧಕರು ಅರ್ಜಿ ನೀಡುವ ಕೊನೆಯ ದಿನಾಂಕವು ಮುಗಿದ ನಂತರ ತಾತ್ಕಾಲಿಕ ನೋಂದಣಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪಡೆದಿರುತ್ತಾರೆ, 01 ಅರ್ಜಿಯ ಸಂಶೋಧಕರ ಪೋಷಕರ ವಾರ್ಷಿಕ ವರಮಾನವು 2.5 ಲಕ್ಷಕ್ಕಿಂತ ಹೆಚ್ಚಾಗಿರುತ್ತದೆ, 05 ಅರ್ಜಿಗಳ ಸಂಶೋದಕರುಗಳಿಗೆ ಹೊರಗಿನ ಸಂಸ್ಥೆಯ ಮಾರ್ಗದರ್ಶಕರಾಗಿರುತ್ತಾರೆ, ಹಾಗೂ ಅರ್ಜಿ ಸಲ್ಲಿಸಲು ನೀಡಿದ್ದ ಕೊನೆಯ ದಿನಾಂಕದ ನಂತರ 06 ಅರ್ಜಿಗಳು ಬಂದಿರುತ್ತವೆ. ಇವುಗಳಲ್ಲಿ ಕೆಲವುಗಳನ್ನು ನಂಜನಗೂಡು ವಿಧಾನ ಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ಹರ್ಷವರ್ಧನ್ ರವರು ಶಿಫಾರಸ್ಸು ಮಾಡಿರುತ್ತಾರೆ. ನಂತರ ಶಿಷ್ಯವೇತನ ಆಯ್ಕೆ ಮಾಡುವ ಸಂಬಂಧ ಮಾನ್ಯ ಶ್ರೀ ಹರ್ಷವರ್ಧನ್

ರವರು ಮತ್ತು ವಿವಿಧ ವಿದ್ಯಾರ್ಥಿ ಸಂಘಟನೆಗಳು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ವಿಸ್ತರಿಸಿ ಎಲ್ಲರಿಗೂ ಶಿಷ್ಯವೇತನ ನೀಡುವಂತೆ ಮನವಿ ಮಾಡಿದ್ದು, ಈ ಸಂಬಂಧ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಮಾನ್ಯ ಕುಲಪತಿಯವರನ್ನು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ ವಿಶ್ವವಿದ್ಯಾನಿಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧಕರುಗಳಿಗೆ ಪ್ರತಿ ಸಾಲಿನಲ್ಲೂ 20 ಸಂಶೋಧಕರುಗಳಿಗೆ ಶಿಷ್ಯವೇತನಕ್ಕೆ ಆಯ್ಕೆ ಮಾಡಲಾಗುತ್ತಿತ್ತು. ಆದರೆ ಕರ್ನಾಟಕ ಸರ್ಕಾರದ SCSP-TSP ಅಧಿಕಾರಿಗಳು ಈಗಾಗಲೇ ಬಂದು ವಿಶ್ವವಿದ್ಯಾನಿಲಯದಲ್ಲಿರುವ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧಕರುಗಳಿಗೆ ಸಂಶೋಧನಾ ಶಿಷ್ಯವೇತನ ನೀಡುವಂತೆ ಮೌಖಿಕವಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಹೊರ ಸಂಸ್ಥೆಗಳ ಮಾರ್ಗದರ್ಶಕರ ಅಡಿಯಲ್ಲಿ ಸಂಶೋಧನೆ ಕೈಗೊಂಡಿರುವ 05 ಸಂಶೋಧಕರ ಅರ್ಜಿಗಳನ್ನು ಹೊರತುಪಡಿಸಿ ಉಳಿದ 114 ಅರ್ಜಿಗಳ ಸಂಶೋಧಕರುಗಳಿಗೆ ಇವುಗಳಲ್ಲಿ ಆದಾಯ ಮಿತಿ ಹೆಚ್ಚಾಗಿದ್ದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈ ಸಂಬಂಧ "ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು" ರವರಿಗೆ ಪತ್ರ ಬರೆದು ಅಲ್ಲಿಂದ ಆದಾಯದ ಮಾಹಿತಿ ಬರುವವರೆಗೆ ಶ್ರೀ ರವಿವರ್ಮ ಎಸ್. ರವರಿಂದ ಸರ್ಕಾರವು ನಿಗದಿಪಡಿಸಿರುವ ಆದಾಯದ ಮಿತಿಗೆ ನಾನು ಬದ್ಧನಾಗಿರುತ್ತೇನೆಂದು ಹಾಗೂ ಪಡೆದಿರುವ ಶಿಷ್ಯವೇತನವನ್ನು ಮರು ಭರಿಸಿಕೊಡುವಂತೆ ಮುಚ್ಚಳಿಕೆಯನ್ನು ತೆಗೆದುಕೊಂಡು ಶಿಷ್ಯವೇತನ ನೀಡಬಹುದೆಂದು ತೀರ್ಮಾನಿಸಲಾಯಿತು. ಇದರೊಂದಿಗೆ ಸಂಶೋಧಕರುಗಳಿಗೆ ಸಂಶೋಧನಾ ಶಿಷ್ಯವೇತನ ನೀಡಲು ಸರ್ಕಾರದ SCSP-TSP ಯಿಂದ ಬರುವ ಅನುದಾನ ನಿರೀಕ್ಷೆಯಲ್ಲಿ ಮೇಲಿನ ಸಂಶೋಧಕರಿಗೆ ಶಿಷ್ಯವೇತನ ನೀಡಬಹುದೆಂದು ಸಭೆಯಲ್ಲಿ ಹಾಜರಿದ್ದ ಆಯ್ಕೆ ಸಮಿತಿ ಸದಸ್ಯರನ್ನು ಕೋರಿದಾಗ ತಮ್ಮ ಸಲಹೆ ಸರಿಯಾಗಿದೆ ಎಂದು ಒಪ್ಪಿಗೆ ಸೂಚಿಸಿದರು.

ಮುಂದುವರೆದು ಮಾನ್ಯ ಕುಲಪತಿಯವರು ಮಾತನಾಡಿ ಸದರಿ ಸಾಲಿನಲ್ಲಿ ಶಿಷ್ಯವೇತನಕ್ಕೆ ಹೆಚ್ಚಾಗಿ ಸಂಶೋಧಕರನ್ನು ಆಯ್ಕೆ ಮಾಡುತ್ತಿರುವುದರಿಂದ ಈ ಕೆಳಕಂಡ ಷರತ್ತುಗಳೊಂದಿಗೆ ಆದೇಶ ನೀಡುವಂತೆ ತಿಳಿಸಿದರು.

- ➢ ಆಯ್ಕೆಯಾಗಿರುವ ಸಂಶೋಧಕರು ಒಂದು ವರ್ಷದ ನಂತರ ಪ್ರತಿ ವರ್ಷವು ಕನಿಷ್ಟ ಒಂದೊಂದು ಸಂಶೋಧನಾ ಲೇಖನವನ್ನು ಮಹಾ ಪ್ರಬಂಧದ ಶೀರ್ಷಿಕೆಯನ್ನೊಳಗೊಂಡಂತೆ Scopus/Web of Science/UGC-Care List Journals ಗಳಲ್ಲಿ ಕಡ್ಡಾಯವಾಗಿ ಪ್ರಕಟಿಸಬೇಕು ಮತ್ತು ಸದರಿ ಲೇಖನದಲ್ಲಿ ಮಾರ್ಗದರ್ಶಕರ ಹೆಸರಿರಬೇಕು.
- ➢ ಮೂರು ವರ್ಷದ ನಂತರ ಸಂಶೋಧಕರ ಸಂಶೋಧನಾ ಪ್ರಗತಿಯನ್ನು ಪರಿಶೀಲಿಸಲು ಸಂಯೋಜಕರು, ಸಂಶೋಧನಾ ನಿರ್ದೇಶನಾಲಯ, ವಿಷಯಗಳ ಡೀನರು, ವಿಭಾಗಧ್ಯಕ್ಷರು ಮತ್ತು ಮಾರ್ಗದರ್ಶಕರನ್ನೊಳಗೊಂಡ ಸಮಿತಿಯನ್ನು ರಚಿಸಿ ವರದಿ ಬಂದ ನಂತರ ಶಿಷ್ಯವೇತನವನ್ನು ಮುಂದುವರಿಸಲಾಗುವುದು.
- ➢ ಸದರಿ ಸಾಲಿನಲ್ಲಿ ಆಯ್ಕೆಯಾಗಿರುವ ಸಂಶೋಧಕರು ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ಪಡೆಯಲು ಬಯಸಿದಲ್ಲಿ, ಮಾರ್ಚ್ 2022 ರಿಂದ ಲಭ್ಯತೆಯನುಸಾರ ಪ್ರವೇಶಾತಿ ಪಡೆಯುವುದು ಎಂದು ಆದೇಶದ ಷರತ್ತಿನಲ್ಲಿ ನಮೂದಿಸುವಂತೆ ಸಭೆಯು ತೀರ್ಮಾನಿಸಿತು. ಈ ಮೇಲಿನ ಎಲ್ಲಾ ಷರತ್ತುಗಳಿಗೆ ಹಾಜರಿದ್ದ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು. ನಂತರ ಕೊನೆಯಲ್ಲಿ ಉಪಕುಲಸಚಿವರು ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | | | |
|---|---|---|---|
| ಉಪಕುಲಸಚಿವ<br>ಪ.ಜಾತಿ:ಪ.ಪಂಗಡ ವಿಶೇಷ ಘಟಕ<br>ಮೈ.ವಿ.ವಿ. ಮೈಸೂರು<br>Deputy Registrar<br>Special Cell for SC-ST<br>University of Mysore<br>MYSURU-570 005 | ಹಣಕಾಸು ಅಧಿಕಾರಿಗಳು<br>ಮೈಸೂರು ವಿಶ್ವವಿದ್ಯಾನಿಲಯ<br>Assistant Finance Officer<br>University of Mysore<br>Mysore. | ಕುಲಸಚಿವ<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು | ಕುಲಪತಿ<br>ಮೈಸೂರು ವಿಶ್ವವಿದ್ಯಾನಿಲಯ<br>ಕುಲಪತಿ<br>ಮೈಸೂರು ವಿಶ್ವವಿದ್ಯಾನಿಲಯ<br>ಮೈಸೂರು-570 005 |

"ಅನುಬಂಧ - 4"

-172-

# ಮೈಸೂರು ವಿಶ್ವವಿದ್ಯಾನಿಲಯ

(4.0 ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)
(ಎನ್‌ಐಆರ್‌ಎಫ್–2023 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 44ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 71ನೇ ಸ್ಥಾನ)

ಸಂಖ್ಯೆ: ವಿಫ8/02/2021-22/373

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು–570 005
**ದಿನಾಂಕ: 26.10.2023**

## ಅಧಿಸೂಚನೆ

**ವಿಷಯ: ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ವತಿಯಿಂದ 2023–24ನೇ ಸಾಲಿನಲ್ಲಿ 20 ಸಂಶೋಧಕರುಗಳಿಗೆ ಶಿಷ್ಯವೇತನ ನೀಡಲು ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ:**

*****

ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ವತಿಯಿಂದ ಯುಜಿಸಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ. ನಿಯಮಾವಳಿಗಳ ಪ್ರಕಾರ ಸಂಶೋಧನಾ ಕಾರ್ಯವನ್ನು ನಿರ್ವಹಿಸುವ ಸಂಶೋಧಕರುಗಳಿಗೆ ಶಿಷ್ಯವೇತನ ನೀಡುವ ಸಲುವಾಗಿ **ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳನ್ನು ಹೊರತುಪಡಿಸಿ ಸ್ನಾತಕೋತ್ತರ ಪದವಿಯಲ್ಲಿ ಶೇ. 50ಕ್ಕಿಂತ ಹೆಚ್ಚು** ಅಂಕ ಪಡೆದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಂದ 2023–24ನೇ ಸಾಲಿಗೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ 20 ಸಂಶೋಧನಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

**ಅರ್ಜಿ ಶುಲ್ಕ ರೂ. 100/-** (ಒಂದು ನೂರು ರೂಪಾಯಿಗಳು ಮಾತ್ರ) ಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಖಾತೆಗೆ **ಕ್ರಾಫರ್ಡ್ ಭವನ ಆವರಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ** ಶಾಖೆಯಲ್ಲಿ ಜಮಾ ಮಾಡಿ ಮೂಲ ಚಲನ್ ಅನ್ನು **ವಿಶೇಷಾಧಿಕಾರಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು** ಇವರಿಗೆ ಸಲ್ಲಿಸಿ ಅರ್ಜಿಗಳನ್ನು, ಕಛೇರಿ ಸಮಯ ಬೆಳಿಗ್ಗೆ 10.00 ರಿಂದ ಸಂಜೆ 5.30 ವೇಳೆಯಲ್ಲಿ, ಪಡೆಯಬಹುದಾಗಿದೆ. **ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ: 24.11.2023ರ ಸಂಜೆ 5.30 ಗಂಟೆಯೊಳಗೆ ಈ ಕಛೇರಿಗೆ** ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ. ತಡವಾಗಿ ಬಂದ ಹಾಗೂ ಅಪೂರ್ಣಗೊಂಡ ಅರ್ಜಿಗಳನ್ನು ಯಾವುದೇ ಸೂಚನೆಯನ್ನು ನೀಡದೇ ತಿರಸ್ಕರಿಸಲಾಗುವುದು.

**ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು:**

1. ಶುಲ್ಕ ಪಾವತಿಸಿದ ಮೂಲ ಚಲನ್ **2.** ಮಾರ್ಗದರ್ಶಕರ ಒಪ್ಪಿಗೆ ಪತ್ರ **3.** ಪಿಹೆಚ್.ಡಿ. ತಾತ್ಕಾಲಿಕ ನೋಂದಣಿ ಪತ್ರ (25.10.2023) ರೊಳಗೆ ಪಿಹೆಚ್.ಡಿ. ತಾತ್ಕಾಲಿಕ ನೋಂದಣಿಯಾಗಿರಬೇಕು) **4.** ಎಲ್ಲಾ ಅಂಕಪಟ್ಟಿಗಳ ಪ್ರತಿಗಳು – SSLC ಯಿಂದ ಸ್ನಾತಕೋತ್ತರ ಪದವಿಯವರೆಗೆ **5.** ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ರೂ. 2.5 ಲಕ್ಷ ದೊಳಗಿರಬೇಕು) **6.** ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಗಳ ಮಾರ್ಗದರ್ಶಕರು ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟಿರಬೇಕು (ಮಾನಸಗಂಗೋತ್ರಿಯ ವಿಭಾಗಗಳು, ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರಗಳು ಹಾಗೂ ಘಟಕ ಕಾಲೇಜುಗಳು) **7.** ಹೈದ್ರಾಬಾದ್ ಕರ್ನಾಟಕ ವಿಶೇಷ ಚೇತನರು ಹಾಗೂ ತೃತೀಯ ಲಿಂಗಿಗಳ ಅಡಿಯಲ್ಲಿ ಮೀಸಲಾತಿ ಕೋರಿದಲ್ಲಿ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಪೂರಕ ದಾಖಲೆಗಳನ್ನು ಲಗತ್ತಿಸುವುದು 8. ಸಂಶೋಧನಾ ವಿದ್ಯಾರ್ಥಿಗಳನ್ನು ವಿಭಾಗವಾರು, ವಿದ್ಯಾರ್ಹತೆಯ ಜೇಷ್ಠತೆ (Merit) ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ಇದರ ಅಂತಿಮ ತೀರ್ಮಾನವು ವಿಶ್ವವಿದ್ಯಾನಿಲಯದಾಗಿರುತ್ತದೆ.

ಮೇಲಿನಂತೆ ಅರ್ಜಿ ಮತ್ತು ದಾಖಲಾತಿಗಳನ್ನು ಮಾರ್ಗದರ್ಶಕರು ಹಾಗೂ ವಿಭಾಗದ ಅಧ್ಯಕ್ಷರು/ನಿರ್ದೇಶಕರು/ಪ್ರಾಂಶುಪಾಲರ ಮುಖಾಂತರ **"ವಿಶೇಷಾಧಿಕಾರಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ"**ಕ್ಕೆ ಸಲ್ಲಿಸತಕ್ಕದ್ದು.

ಕುಲಸಚಿವ

**ಗೆ,**

1. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ವಾರ್ತಾ ಭವನ, ಮೈಸೂರು ಜಿಲ್ಲೆ, ಮೈಸೂರು
2. ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಚಾಮರಾಜನಗರ, ಮಂಡ್ಯ ಮತ್ತು ಹಾಸನ {ಇವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ಪ್ರಕಟಣೆಯನ್ನು ಎಲ್ಲಾ ದಿನಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಬೇಕೆಂದು ಕೋರಲಾಗಿದೆ}
3. ನಿಲಯದ ನಿರ್ದೇಶಕರು, ಆಕಾಶವಾಣಿ ಕೇಂದ್ರ, ಮೈಸೂರು ರವರು ಉಚಿತವಾಗಿ ಸುದ್ದಿಯನ್ನು ಬಿತ್ತರಿಸಬೇಕೆಂದು ಕೋರಲಾಗಿದೆ
4. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಕೇಂದ್ರಗಳು, ಮಾನಸಗಂಗೋತ್ರಿ, ಮೈಸೂರು ಹಾಗೂ ಸ್ನಾತಕೋತ್ತರ ಕೇಂದ್ರ ಚಾಮರಾಜನಗರ, ಮಂಡ್ಯ ಮತ್ತು ಹಾಸನ
5. ಪ್ರಾಂಶುಪಾಲರು, ಮಹಾರಾಜ/ಯುವರಾಜ/ಲಲಿತ ಕಲಾ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
6. ಆಡಳಿತಾಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು
7. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು
8. ಮಾನ್ಯ ಕುಲಪತಿಯವರ/ಕುಲಸಚಿವರ/ಕುಲಸಚಿವರು(ಪರೀಕ್ಷಾಂಗ) ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
9. ಕಛೇರಿ ಪ್ರತಿ

ಮೈಸೂರು ವಿಶ್ವವಿದ್ಯಾನಿಲಯ ಅಡಕ "ಅ"

-173-

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ, ಮೈಸೂರು

**2023–24ನೇ ಸಾಲಿನಲ್ಲಿ ಪಿಹೆಚ್.ಡಿ. ಶಿಷ್ಯವೇತನಕ್ಕೆ ಅರ್ಜಿಸಲ್ಲಿಸಿರುವ ಎಲ್ಲಾ ಸಂಶೋಧನಾ ಅಭ್ಯರ್ಥಿಗಳ ಪಟ್ಟಿ**

| Sl. No. | ಹೆಸರು | ಜಾತಿ | ಅಧ್ಯಯನ ವಿಭಾಗ |
|---|---|---|---|
| 1 | ಸುಭಾಷ್ ಎಂ. | SC | ಸಹಕಾರ ವಿಭಾಗ<br>ಮಹಾರಾಜ ಕಾಲೇಜು<br>ಮೈಸೂರು |
| 2 | ಚೇತನ್ | SC | ಸಹಕಾರ ವಿಭಾಗ<br>ಮಹಾರಾಜ ಕಾಲೇಜು<br>ಮೈಸೂರು |
| 3 | ಅಶ್ವಿನಿ ಎಸ್.ಪಿ. | SC | ಅರ್ಥಶಾಸ್ತ್ರ ವಿಭಾಗ<br>ಮಹಾರಾಜ ಕಾಲೇಜು ಮೈಸೂರು |
| 4 | ನಾಗರಾಜು | SC | ಗಾಂಧಿ ಅಧ್ಯಯನ ಕೇಂದ್ರ<br>ಮಾನಸಗಂಗೋತ್ರಿ, ಮೈಸೂರು |
| 5 | ಮಹಾಂತಪ್ಪ | SC | ಇತಿಹಾಸ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| 6 | ಶರತ್ ಕುಮಾರ್ ಆರ್. | SC | ಹಿಂದಿ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| 7 | ಶಶಿಕಲಾ ಡಿ.ಎಸ್. | SC | ಕನ್ನಡ ವಿಭಾಗ<br>ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಅಧ್ಯಯನ ಕೇಂದ್ರ,<br>ತೂಬಿನಕೆರೆ ಮಂಡ್ಯ |
| 8 | ಕೃಷ್ಣಪ್ಪ | SC | ರಾಜ್ಯಶಾಸ್ತ್ರ ವಿಭಾಗ<br>ಮಹಾರಾಜ ಕಾಲೇಜು ಮೈಸೂರು |
| 9 | ಸುಮ ವಿ. | SC | ಸಾರ್ವಜನಿಕ ಆಡಳಿತ ವಿಭಾಗ<br>ಮಹಾರಾಜ ಕಾಲೇಜು ಮೈಸೂರು |
| 10 | ಸೋಮಣ್ಣ ಕೆ. | SC | ಮಹಿಳಾ ಅಧ್ಯಯನ ಕೇಂದ್ರ<br>ಮಾನಸಗಂಗೋತ್ರಿ, ಮೈಸೂರು |
| 11 | ಚಾಂದಿನಿ ಎಸ್. | SC | ಪತ್ರಿಕೋದ್ಯಮ ಮತ್ತು<br>ಸಂವಹನ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು |
| 12 | ರಾಜಮಣಿ ಆರ್. | SC | ಪತ್ರಿಕೋದ್ಯಮ ಮತ್ತು<br>ಸಂವಹನ ಅಧ್ಯಯನ ವಿಭಾಗ ಮಾನಸಗಂಗೋತ್ರಿ, ಮೈಸೂರು |
| 13 | ಪ್ರದೀಪ್ ಕುಮಾರ್ ಎನ್. | SC | ಅಪರಾದಶಾಸ್ತ್ರ ವಿಭಾಗ<br>ಮಹಾರಾಜ ಕಾಲೇಜು<br>ಮೈಸೂರು |
| 14 | ನವೀನ್ ಪಿ | SC | ಅಣುಜೀವಶಾಸ್ತ್ರ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| 15 | ಪ್ರಭುದೇವ ಬಿ.ಬಿ. | SC | ರಸಾಯನಶಾಸ್ತ್ರ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |

-174-

| | | | |
|---|---|---|---|
| 16 | ಹಿತೇಶ್ ಎಂ.ಸಿ. | SC | ರಸಾಯನಶಾಸ್ತ್ರ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| 17 | ಭೈರವ ಆರ್. | SC | ಗಣಕ ವಿಜ್ಞಾನ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| 18 | ನಯನ ಎಸ್ | SC | ಸೂಕ್ಷ್ಮಜೀವಶಾಸ್ತ್ರ<br>ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| 19 | ಇಂಪನ ಸಿ.ಎಸ್. | SC | ವ್ಯವಹಾರ ಆಡಳಿತ (ಬಿ.ಐ.ಎಂ.ಎಸ್) ಅಧ್ಯಯನ ವಿಭಾಗ,<br>ಮಾ.ಗಂ., ಮೈಸೂರು |
| 20 | ದಿಲೀಪ್ ಕುಮಾರ್ ಎಸ್. | SC | ವ್ಯವಹಾರ ಆಡಳಿತ (ಬಿ.ಐ.ಎಂ.ಎಸ್) ಅಧ್ಯಯನ ವಿಭಾಗ,<br>ಮಾ.ಗಂ., ಮೈಸೂರು |
| 21 | ಭುವನೇಶ್ವರಿ ಎಸ್. | ST | ರಾಜ್ಯಶಾಸ್ತ್ರ ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| 22 | ಚೈತ್ರ ಎಂ. | ST | ಕನ್ನಡ ವಿಭಾಗ<br>ಯುವರಾಜ ಕಾಲೇಜು ಮೈಸೂರು |
| 23 | ರಾಜೇಶ ಹೆಚ್.ಆರ್. | ST | ಕನ್ನಡ ವಿಭಾಗ<br>ಮಹಾರಾಜ ಕಾಲೇಜು ಮೈಸೂರು |

**2023-24ನೇ ಸಾಲಿನ ಪಿಹೆಚ್.ಡಿ. ಶಿಷ್ಯವೇತನಕ್ಕೆ ಹೊರ ವಿಶ್ವವಿದ್ಯಾನಿಲಯ ಹಾಗೂ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವವರ ವಿವರ**

| | | | |
|---|---|---|---|
| 1 | ಮಹೇಶ ಪಿ. | SC | ಕನ್ನಡ ವಿಭಾಗ<br>ಮಹಾರಾಜ ಕಾಲೇಜು<br>ಮೈಸೂರು |
| 2 | ಸತೀಶ ಎ. | SC | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾ.ಗಂ, ಮೈಸೂರು |
| 3 | ಭೂಮಿಕ ಕೆ.ಎನ್. | SC | ವಾಣಿಜ್ಯ ಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ,<br>ಮೈಸೂರು |
| 4 | ಮಲ್ಲಿಗಾದೇವಿ ಎಸ್.ಎನ್. | ST | ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಮಾನಸಗಂಗೋತ್ರಿ,<br>ಮೈಸೂರು |
| 5 | ದಾಸಯ್ಯ ಡಿ. | SC | ಅರ್ಥಶಾಸ್ತ್ರ ವಿಭಾಗ<br>ಮಹಾರಾಜ ಕಾಲೇಜು ಮೈಸೂರು |
| 6 | ಪಲ್ಲವಿ ಟಿ. | SC | ಅರ್ಥಶಾಸ್ತ್ರ ವಿಭಾಗ<br>ಮಹಾರಾಜ ಕಾಲೇಜು ಮೈಸೂರು |
| 7 | ವೈಶಿಷ್ಟ್ಯ ಹೆಚ್. | SC | ವ್ಯವಹಾರ ಆಡಳಿತ (ಬಿ.ಐ.ಎಂ.ಎಸ್) ಅಧ್ಯಯನ ವಿಭಾಗ,<br>ಮಾ.ಗಂ., ಮೈಸೂರು |
| 8 | ಕಿರಣ್ ಕುಮಾರ್ ಎಸ್. | SC | ಕನ್ನಡ ವಿಭಾಗ<br>ಯುವರಾಜ ಕಾಲೇಜು ಮೈಸೂರು |
| 9 | ಹರೀಶ | SC | ಕನ್ನಡ ವಿಭಾಗ<br>ಯುವರಾಜ ಕಾಲೇಜು ಮೈಸೂರು |
| 10 | ಶಂಕರ ಹೆಚ್.ಎಸ್. | SC | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾ.ಗಂ, ಮೈಸೂರು |

2023–24ನೇ ಸಾಲಿನ ಪಿಹೆಚ್.ಡಿ. ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸಿದ್ದು, 25.10.2023ರ
ನಂತರ ಪಿಹೆಚ್.ಡಿ ತಾತ್ಕಾಲಿಕ ನೋಂದಣಿಯಾಗಿರುವ ವಿವರ

| | | | |
|---|---|---|---|
| 1 | ಪ್ರಮೋದ್ ಬಿ. | SC | ಕನ್ನಡ ವಿಭಾಗ<br>ಯುವರಾಜ ಕಾಲೇಜು ಮೈಸೂರು |
| 2 | ಸುಬ್ರಮಣ್ಯ | SC | ಕನ್ನಡ ವಿಭಾಗ<br>ಯುವರಾಜ ಕಾಲೇಜು ಮೈಸೂರು |
| 3 | ಶರತ್ ಕುಮಾರ್ ಎಸ್. | SC | ಕನ್ನಡ ವಿಭಾಗ<br>ಯುವರಾಜ ಕಾಲೇಜು ಮೈಸೂರು |
| 4 | ಮೀನಾಕ್ಷಿ ಬಿ. | ST | ಗ್ರಂಥಾಲಯ ಮತ್ತು ಮಾಹಿತಿ<br>ವಿಜ್ಞಾನ ಅಧ್ಯಯನ ವಿಭಾಗ<br>ಮಾನಸಗಂಗೋತ್ರಿ, ಮೈಸೂರು |
| 5 | ಯೋಗೇಶ್ ಹೆಚ್.ಎಸ್. | SC | ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ,<br>ಮೈಸೂರು |
| 6 | ಮಹದೇವಸ್ವಾಮಿ ಜೆ. | SC | ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗ<br>ಮೈಸೂರು |

Special Officer
Special Cell for SC / STs
University of Mysore
MYSURU-570 005
18/9/24

Subject No. 2024/1.24



**ಶ್ರೀ.ಶಿವಕುಮಾರ್ .ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರು ಕಾಲೇಜಿನ ಅವರಣದಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿರುವ ಪ್ರಕರಣದ ಬಗೆಗೆ.**

*****

ಶ್ರೀ.ಶಿವಕುಮಾರ್ .ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರು ಯುವರಾಜ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರು ದಿನಾಂಕ:03-01-2024ರಂದು ಮಧ್ಯಾಹ್ನ ಸುಮಾರು 12.30 ಗಂಟೆಯ ಸಮಯದಲ್ಲಿ ಯುವರಾಜ ಕಾಲೇಜಿನ ಆವರಣದಲ್ಲಿ ಆತ್ಮಹತ್ಯೆ ಪತ್ರವನ್ನು (Death Note ವಾಟ್ಸಪ್ ಪ್ರತಿ) ಬರೆದಿಟ್ಟು ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವುದು ತಿಳಿದು ಬಂದಿರುತ್ತದೆ. ಈ ಉದ್ಯೋಗಿಯು ಆತ್ಮಹತ್ಯೆಗೆ ಯತ್ನಿಸುವ ಮುನ್ನ ಬರೆದಿರುವ ಆತ್ಮಹತ್ಯೆ ಪತ್ರ(Death Note)ದಲ್ಲಿ, ತಾನು ಆತ್ಮಹತ್ಯೆ ಮಾಡಿಕೊಳ್ಳಲು ಯುವರಾಜ ಕಾಲೇಜಿನ ಪ್ರಾಂಶುಪಾಲರಾದ ಡಾ.ಹೆಚ್.ಸಿ.ದೇವರಾಜೇಗೌಡ ನೇರ ಕಾರಣರಾಗಿರುತ್ತಾರೆಂದು ಉಲ್ಲೇಖಿಸಿರುತ್ತಾರೆ.

ಮೇಲಿನ ಪ್ರಕರಣದ ಸಂಬಂಧ ಶ್ರೀ.ಶಿವಕುಮಾರ್‌ರವರ ಪತ್ನಿ, ಲಕ್ಷ್ಮೀಪುರಂ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಪ್ರಥಮ ವರ್ತಮಾನ ವರದಿ(FIR Copy) ಯನ್ನು ಈ ಕಛೇರಿಗೆ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರ ಆದೇಶದ ಮೇರೆಗೆ ಡಾ. ಹೆಚ್.ಸಿ.ದೇವರಾಜೇಗೌಡ, ಪ್ರಾಂಶುಪಾಲರು(ಪ್ರಭಾರ), ಯುವರಾಜ ಕಾಲೇಜು, ಮೈಸೂರು ಇವರಿಗೆ ಕಾರಣ ಕೇಳುವ ನೋಟಿಸ್ ಅನ್ನು ಜಾರಿ ಮಾಡಲಾಗಿತ್ತು. ಈ ಸಂಬಂಧ ದಿನಾಂಕ:08-01-2024ರಂದು ಸದರಿ ಕಾರಣ ಕೇಳುವ ನೋಟಿಸ್‌ಗೆ ಸ್ಪಷ್ಟೀಕರಣವನ್ನು ಯಾವುದೇ ಪೂರಕ ದಾಖಲಾತಿ ಲಗತ್ತಿಸದೆ ನೀಡಿದ್ದರು.

ಮೇಲಿನ ಎಲ್ಲಾ ಅಂಶಗಳು ಹಾಗೂ ದಾಖಲಾತಿಗಳನ್ನೊಳಗೊಂಡಂತೆ ದಿನಾಂಕ:10-01-2024ರಂದು (ಅನುಬಂಧ-ಅ) ಜರುಗಿದ ವಿಶೇಷ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸಲಾಗಿ ಸಭೆಯು ಈ ಮುಂದಿನಂತೆ ತೀರ್ಮಾನಿಸಿರುತ್ತದೆ.

> "ಯುವರಾಜ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಹೆಚ್.ಸಿ.ದೇವರಾಜೇಗೌಡ ಹಾಗೂ ಶ್ರೀ ಶಿವಕುಮಾರ್. ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರುಗಳ ವಿರುದ್ಧ ವಿಚಾರಣೆ ಪೂರ್ಣಗೊಳಿಸಿ ವರದಿ ಸಲ್ಲಿಸುವವರೆಗೆ ಕಡ್ಡಾಯ ರಜೆಯ ಮೇಲೆ ಕಳುಹಿಸುವುದು ಹಾಗೂ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೇ ಯಾವುದೇ ಕಾರಣಕ್ಕೂ ಕೇಂದ್ರ ಸ್ಥಾನವನ್ನು ಬಿಡಬಾರದೆಂಬ ಷರತ್ತಿನೊಂದಿಗೆ ವಿಶ್ವವಿದ್ಯಾನಿಲಯದಿಂದ ನಿರ್ದೇಶನ ನೀಡುವುದು. ಈ ಪ್ರಕರಣದ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ, ಅವರು ನೀಡುವ ವರದಿಯ ಮೇರೆಗೆ ಕ್ರಮಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು".

ಮೇಲಿನ ಸಿಂಡಿಕೇಟ್ ಸಭೆಯ ತೀರ್ಮಾನದನ್ವಯ ಸದರಿಯವರುಗಳನ್ನು ಈಗಾಗಲೇ ದಿನಾಂಕ: 17-01-2024ರ (ಅನುಬಂಧ-ಆ) ವಿಶ್ವವಿದ್ಯಾನಿಲಯದ ಆದೇಶದಲ್ಲಿ ಕಡ್ಡಾಯ ರಜೆಯ ಮೇಲೆ ಕಳುಹಿಸಲಾಗಿದ್ದು ಹಾಗೂ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೇ ಯಾವುದೇ ಕಾರಣಕ್ಕೂ ಕೇಂದ್ರ ಸ್ಥಾನವನ್ನು ಬಿಡಬಾರದೆಂಬ ಷರತ್ತಿನೊಂದಿಗೆ ವಿಶ್ವವಿದ್ಯಾನಿಲಯದಿಂದ ನಿರ್ದೇಶನ ನೀಡಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಡಾ. ಹೆಚ್.ಸಿ.ದೇವರಾಜೇಗೌಡ ಇವರು ವಿರುದ್ಧ ಆರೋಪಣಾ ಹಾಗೂ ದೋಷಾರೋಪಣಾ (ಅನುಬಂಧ-ಇ) ಪಟ್ಟಿಯನ್ನು ಸಿದ್ಧಪಡಿಸಿ ಸದರಿ ಪಟ್ಟಿಯನ್ನು ಶಿಸ್ತು ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ಮುಂದುವರೆದು, ದಿನಾಂಕ:10-01-2024ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಈ ಪ್ರಕರಣದ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ, ಅವರು ನೀಡುವ ವರದಿಯ ಮೇರೆಗೆ ಕ್ರಮಕೈಗೊಳ್ಳಲು ತೀರ್ಮಾನಿಸಲಾಗಿದೆ, ಆದುದರಿಂದ ಈ ಪ್ರಕರಣ ಸಂಬಂಧ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಿಸುವ ಸಂಬಂಧ ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

---

(ಅನುಬಂಧ-ಉ)

-177-

Subject No. 2024/SPl.1

**ಶ್ರೀ.ಶಿವಕುಮಾರ್ .ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರು ಕಾಲೇಜಿನ ಅವರಣದಲ್ಲಿ ಆತ್ಮಹತ್ಯೆ ಪತ್ರವನ್ನು ಬರೆದಿಟ್ಟು ನಿದ್ರೆ ಮಾತ್ರೆಗಳನ್ನು ತೆಗೆದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿರುವ ಪ್ರಕರಣದ ಬಗೆಗೆ.**

*****

ಶ್ರೀ.ಶಿವಕುಮಾರ್ .ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರು ಯುವರಾಜ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರು ದಿನಾಂಕ:03–01–2024ರಂದು ಮಧ್ಯಾಹ್ನ ಸುಮಾರು 12.30 ಗಂಟೆಯ ಸಮಯದಲ್ಲಿ ಯುವರಾಜ ಕಾಲೇಜಿನ ಆವರಣದಲ್ಲಿ ಆತ್ಮಹತ್ಯೆ ಪತ್ರವನ್ನು (Death Note ವಾಟ್ಸಪ್ ಪ್ರತಿ) ಬರೆದಿಟ್ಟು ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವುದು ತಿಳಿದು ಬಂದಿರುತ್ತದೆ. ಈ ಉದ್ಯೋಗಿಯು ಆತ್ಮಹತ್ಯೆಗೆ ಯತ್ನಿಸುವ ಮುನ್ನ ಬರೆದಿರುವ ಆತ್ಮಹತ್ಯೆ ಪತ್ರ(Death Note)ದಲ್ಲಿ, ನಾನು ಆತ್ಮಹತ್ಯೆ ಮಾಡಿಕೊಳ್ಳಲು ಯುವರಾಜ ಕಾಲೇಜಿನ ಪ್ರಾಂಶುಪಾಲರಾದ ಡಾ.ಹೆಚ್.ಸಿ.ದೇವರಾಜೇಗೌಡ ನೇರ ಕಾರಣರಾಗಿರುತ್ತಾರೆಂದು ಉಲ್ಲೇಖಿಸಿರುತ್ತಾರೆ.(ಅನುಬಂಧ–ಅ)

ಈ ಸಂಬಂಧ, ಕಾರ್ಯದರ್ಶಿ, ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿ ವರ್ಗದವರ ಸಂಘ(ರಿ.), ಕ್ರಾಫರ್ಡ್ ಭವನ, ಮೈಸೂರು ಇವರು ತಮ್ಮ ಪತ್ರದಲ್ಲಿ ಡಾ.ಹೆಚ್.ಸಿ. ದೇವರಾಜೇಗೌಡ, ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ಇವರು ಅನವಶ್ಯಕವಾಗಿ ಹಲವಾರು ತಿಂಗಳಿನಿಂದ ಕಿರುಕುಳ ಕೊಡುತ್ತಾ ಬಂದಿದ್ದರು. ಆದರೂ ಸಹ ಶ್ರೀ.ಶಿವಕುಮಾರ್‌ರವರು ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸಿಕೊಂಡು ಹೋಗುತ್ತಿದ್ದರು. ತದನಂತರ ಸದರಿ ಸಿಬ್ಬಂದಿಗೆ ತೊಂದರೆ ಹೆಚ್ಚಾಗಿ ದಿನಾಂಕ:03–01–2024 ಮಧಾಹ್ನ 12.30 ಗಂಟೆಗೆ ಕಾಲೇಜಿನ ಅವರಣದಲ್ಲಿ ಆತ್ಮಹತ್ಯೆ ಪತ್ರವನ್ನು ಬರೆದಿಟ್ಟು ಸುಮಾರು 100 ನಿದ್ರೆ ಮಾತ್ರೆಯನ್ನು ತೆಗೆದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿ, ಪ್ರಸ್ತುತ ಅಪೋಲೊ ಆಸ್ಪತ್ರೆಯಲ್ಲಿ ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದಾರೆ. ಈ ಎಲ್ಲಾ ಘಟನೆಗಳನ್ನು ಪರಿಗಣಿಸಿ ಈ ಕೂಡಲೇ ಡಾ.ಹೆಚ್.ಸಿ.ದೇವರಾಜೇಗೌಡ, ಪ್ರಾಂಶುಪಾಲರು, ಯುವರಾಜ ಕಾಲೇಜು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ಕೂಡಲೇ ಅಮಾನತ್ತು ಮಾಡುವ ಮೂಲಕ ನ್ಯಾಯ ದೊರಕಿಸಿ ಕೊಡಬೇಕೆಂದು ಕೋರಿದ್ದರು.(ಅನುಬಂಧ–ಆ)

ಮುಂದುವರೆದು ಶ್ರೀ. ಶಿವಕುಮಾರ್. ಜೆ ರವರ ಪತ್ನಿಯವರು ಸಹ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ (ಅನುಬಂಧ–ಇ), ಮೇಲ್ಕಂಡ ಕೃತ್ಯದ ಬಗ್ಗೆ ವಿಮರ್ಶಿಸಿ ಕಾನೂನು ಕ್ರಮ ಜರುಗಿಸಿ ಅವರ ಪತಿಯ ಸ್ಥಿತಿಗೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸಲು ವಿನಂತಿಸಿರುತ್ತಾರೆ ಮತ್ತು ದಿನಾಂಕ:05.01.2024ರಂದು ಈ ಪ್ರಕರಣದ ಸಂಬಂಧ ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಪ್ರಥಮ ವರ್ತಮಾನ ವರದಿ(FIR Copy)ಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.(ಅನುಬಂಧ–ಈ)

ಇದಲ್ಲದೆ, ಮತ್ತೊಂದು ಪತ್ರದಲ್ಲಿ ಯುವರಾಜ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ 56 ಉದ್ಯೋಗಿಗಳು ಸಹ ಸದರಿಯವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಂಡು ಕಾಲೇಜಿನಲ್ಲಿ ನೆಮ್ಮದಿಯಿಂದ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಬೇಕೆಂದು (ಅನುಬಂಧ–ಉ) ಹಾಗೂ ಕಾಲೇಜಿನ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಮಹೇಶ್ ಕುಮಾರ್.ಸಿ.ಆರ್ ಅವರು ಸಹ ಸದರಿಯವರು ಇವರನ್ನು ಏಕವಚನದಿಂದ, ಅಗೌರವದಿಂದ ಮಾತಾನಾಡಿಸುತ್ತಿದ್ದು, ಇದರಿಂದ ಪ್ರತಿದಿನ ಕಾರ್ಯನಿರ್ವಹಿಸಲು ತೊಂದರೆಯಾಗುತ್ತಿದೆ. ನನ್ನನ್ನು

ಎಲ್ಲಾ ಸಹೋದ್ಯೋಗಿಗಳ ಮುಂದೆಯೂ ಸಹ ಕೀಳಾಗಿ ಮಾತನಾಡುತ್ತಾರೆ. ಪ್ರತಿ ದಿವಸ ಮಾನಸಿಕ ಹಿಂಸೆಯಿಂದ ದೈಹಿಕವಾಗಿ ದುರ್ಬಲನಾಗುತ್ತಿದ್ದು, ಇದರಿಂದ ಮೆಡಿಕಲ್ ಟ್ರೀಟ್ಮೆಂಟ್ ಅನ್ನು ಪಡೆಯುತ್ತಿದ್ದು ನನ್ನನ್ನು ಬೇರೆಡೆಗೆ
-178- ವರ್ಗಾವಣೆ ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ. (ಅನುಬಂಧ-ಊ)

ಮೇಲಿನ ಪತ್ರಗಳ ಹಿನ್ನೆಲೆಯಲ್ಲಿ ಹಾಗೂ ಈ ಪ್ರಕರಣದ ಸಂಬಂಧ ಶ್ರೀ.ಶಿವಕುಮಾರ್‌ರವರ ಪತ್ನಿ, ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಪ್ರಥಮ ವರ್ತಮಾನ ವರದಿ(FIR Copy) ಯನ್ನು ಈ ಕಛೇರಿಗೆ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಕಡತವನ್ನು ಮಂಡಿಸಲಾಗಿ ಸದರಿ ಕಡತದಲ್ಲಿ ಮಾನ್ಯ ಕುಲಪತಿಯವರು ಡಾ. ಹೆಚ್.ಸಿ.ದೇವರಾಜೇಗೌಡ, ಪ್ರಾಂಶುಪಾಲರು(ಪ್ರಭಾರ), ಯುವರಾಜ ಕಾಲೇಜು, ಮೈಸೂರು ಇವರಿಗೆ ಕಾರಣ ಕೇಳುವ ನೋಟಿಸ್ ಅನ್ನು ಜಾರಿ ಮಾಡುವಂತೆ ಆದೇಶಿಸಿದ್ದ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ಈ ಮುಂದಿನಂತೆ ಕಾರಣ ಕೇಳುವ ನೋಟಿಸ್ ಅನ್ನು ಜಾರಿ ಮಾಡಲಾಗಿರುತ್ತದೆ.

"ಡಾ. ಹೆಚ್.ಸಿ.ದೇವರಾಜೇಗೌಡ, ಪ್ರಾಂಶುಪಾಲರು(ಪ್ರಭಾರ), ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಆದ ನಿಮಗೆ ಈ ಮೂಲಕ ತಿಳಿಸುವುದೇನೆಂದರೆ, ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ಯುವರಾಜ ಕಾಲೇಜಿನಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಶಿವಕುಮಾರ್.ಜೆ. ಇವರು ದಿನಾಂಕ: 03-01-2024ರಂದು ಮಧ್ಯಾಹ್ನ ಸುಮಾರು 12.30 ಗಂಟೆಯ ಸಮಯದಲ್ಲಿ ಯುವರಾಜ ಕಾಲೇಜಿನ ಆವರಣದಲ್ಲಿ ಆತ್ಮಹತ್ಯೆ ಪತ್ರವನ್ನು (Death Note) ಬರೆದಿಟ್ಟು ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವುದು ತಿಳಿದು ಬಂದಿರುತ್ತದೆ. ಈ ಉದ್ಯೋಗಿಯು ಆತ್ಮಹತ್ಯೆಗೆ ಯತ್ನಿಸುವ ಮುನ್ನ ಬರೆದಿರುವ ಆತ್ಮಹತ್ಯೆ ಪತ್ರ(Death Note)ದಲ್ಲಿ, ನಾನು ಆತ್ಮಹತ್ಯೆ ಮಾಡಿಕೊಳ್ಳಲು ಯುವರಾಜ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಸಿ.ದೇವರಾಜೇಗೌಡ ನೇರ ಕಾರಣರಾಗಿರುತ್ತಾರೆಂದು ಉಲ್ಲೇಖಿಸಿದ್ದಾರೆ.

ಇದಲ್ಲದೆ, ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿ ವರ್ಗದವರ ಸಂಘ(ರಿ.) ಅವರು ಈ ಘಟನೆ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ ಕೂಡಲೇ ನಿಮ್ಮ ಮೇಲೆ ವಿಶ್ವವಿದ್ಯಾನಿಲಯದ ವತಿಯಿಂದ ಶಿಸ್ತುಕ್ರಮ ಜರುಗಿಸಲು ಕೋರಿರುತ್ತಾರೆ. ಮುಂದುವರೆದು, ಶ್ರೀ. ಶಿವಕುಮಾರ್ ಜೆ ರವರ ಪತ್ನಿಯವರು ಸಹ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ, ಮೇಲ್ಕಂಡ ಕೃತ್ಯದ ಬಗ್ಗೆ ವಿಮರ್ಶಿಸಿ ಕಾನೂನು ಕ್ರಮ ಜರುಗಿಸಿ ಅವರ ಪತಿಯ ಸ್ಥಿತಿಗೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸಲು ವಿನಂತಿಸಿರುತ್ತಾರೆ ಮತ್ತು ದಿನಾಂಕ:05.01.2024ರಂದು ಈ ಪ್ರಕರಣದ ಸಂಬಂಧ ಲಕ್ಷ್ಮೀಪುರಂ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿ ಪ್ರಥಮ ವರ್ತಮಾನ ವರದಿ(FIR Copy) ಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಇದಲ್ಲದೆ, ಮತ್ತೊಂದು ಪತ್ರದಲ್ಲಿ ಯುವರಾಜ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ 56 ಉದ್ಯೋಗಿಗಳು ಸಹ ನಿಮ್ಮ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಂಡು ಕಾಲೇಜಿನಲ್ಲಿ ನೆಮ್ಮದಿಯಿಂದ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಬೇಕೆಂದು ಹಾಗೂ ಕಾಲೇಜಿನ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಮಹೇಶ್ ಕುಮಾರ್.ಸಿ.ಆರ್ ಅವರು ಸಹ ನೀವು ಅವರನ್ನು ಏಕವಚನದಿಂದ, ಅಗೌರವದಿಂದ ಮಾತಾನಾಡಿಸುತ್ತಿದ್ದು, ಇದರಿಂದ ಪ್ರತಿದಿನ ಕಾರ್ಯನಿರ್ವಹಿಸಲು ತೊಂದರೆಯಾಗುತ್ತಿದೆ. ನನ್ನನ್ನು ಎಲ್ಲಾ ಸಹೋದ್ಯೋಗಿಗಳ ಮುಂದೆಯೂ ಸಹ ಕೀಳಾಗಿ ಮಾತನಾಡುತ್ತಾರೆ. ಪ್ರತಿ ದಿವಸ ಮಾನಸಿಕ ಹಿಂಸೆಯಿಂದ ದೈಹಿಕವಾಗಿ ದುರ್ಬಲನಾಗುತ್ತಿದ್ದು, ಇದರಿಂದ ಮೆಡಿಕಲ್ ಟ್ರೀಟ್ಮೆಂಟ್ ಅನ್ನು ಪಡೆಯುತ್ತಿದ್ದು ನನ್ನನ್ನು ಬೇರೆಡೆಗೆ ವರ್ಗಾವಣೆ ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ.

ಈ ಮೇಲೆ ವಿವರಿಸಿರುವ ಘಟನೆ ಮತ್ತು ಸಲ್ಲಿಸಿರುವ ಮನವಿ ಹಾಗೂ ಲಕ್ಷ್ಮೀಪುರಂ ಪೋಲಿಸ್ ಠಾಣೆಯ ಪ್ರಥಮ ವರ್ತಮಾನ ವರದಿ(FIR Copy)ಯ ಅನ್ವಯ ನಿಮ್ಮ ಮೇಲೆ ಏಕೆ ಶಿಸ್ತುಕ್ರಮ ಜರುಗಿಸಬಾರದು ಎಂಬುದಕ್ಕೆ ಲಿಖಿತ ರೂಪದಲ್ಲಿ ಸ್ಪಷ್ಟೀಕರಣವನ್ನು ಈ ನೋಟಿಸ್ ತಲುಪಿದ 24 ಗಂಟೆಗಳ ಒಳಗಾಗಿ ನೀಡುವಂತೆ ತಿಳಿಸಲಾಗಿದೆ. ತಪ್ಪಿದಲ್ಲಿ ಈ ಪ್ರಕರಣದ/ಘಟನೆಯ ಬಗ್ಗೆ ನೀವು ಹೇಳುವುದು ಏನೂ ಇಲ್ಲವೆಂದು ಪರಿಗಣಿಸಿ, ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಸಿಸಿಎ ಅಧಿನಿಯಮ 1983ರ ಪ್ರಕಾರ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿದೆ".(ಅನುಬಂಧ-ಋ)

ಮೇಲಿನಂತೆ ನೀಡಿದ್ದ ಕಾರಣ ಕೇಳುವ ನೋಟಿಸ್‌ಗೆ ಪ್ರತಿಯಾಗಿ ಡಾ. ಹೆಚ್.ಸಿ. ದೇವರಾಜೇಗೌಡ, ಪ್ರಭಾರ ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ:

...4ರಂದು ಮಧ್ಯಾಹ್ನ 12.10ರ ಸಮಯದಲ್ಲಿ ಈ ಮುಂದಿನಂತೆ ಉತ್ತರವನ್ನು ವಿಶ್ವವಿದ್ಯಾನಿಲಯಕ್ಕೆ ...ತ್ತಾರೆ.

"ಕಂಡಿಕೆ-1:ಈ ಮೇಲಿನ ವಿಳಾಸದಲ್ಲಿ ತಿಳಿಸಿರುವ ನಾನು ಸದರಿ ಸಂಸ್ಥೆಗೆ 05/09/1992ರಂದು ಅಧ್ಯಾಪಕರಾಗಿ ಸೇರಿ ಸೇವೆ ಸಲ್ಲಿಸಲು ಆರಂಭಿಸಿರುತ್ತೇನೆ. ತದನಂತರ ವಿವಿಧ ಸಾಮಾರ್ಥ್ಯಗಳಲ್ಲಿ ಹುದ್ದೆಗಳಾದ, ವಿಭಾಗ ಮುಖ್ಯಸ್ಥ, ಪರೀಕ್ಷ ನಿಯಂತ್ರಣಾಧಿಕಾರಿಯಾಗಿ ಮತ್ತು ಆಡಳಿತಾಧಿಕಾರಿಯಾಗಿ ಕರ್ತವ್ಯಕ್ಕೆ ಯಾವುದೇ ಚ್ಯುತಿ ಬಾರದಂತೆ ಸೇವೆ ಸಲ್ಲಿಸಿರುತ್ತೇನೆ. ಜೊತೆಗೆ ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ, ನಂತರ ಯುವರಾಜ ಕಾಲೇಜಿಗೆ ದಿನಾಂಕ:16-11-2022ರಂದು ಪ್ರಾಂಶುಪಾಲರಾಗಿ ವರ್ಗಾವಣೆಯಾಗಿ ಕರ್ತವ್ಯ ನಿರ್ವಹಿಸುತ್ತಿರುವುದು ಸರಿಯಷ್ಟೆ. ಈ ಮೇಲಿನ ಕಾರಣಗಳಿಂದಾಗಿ ನನಗೆ ಸದರಿ ಸಂಸ್ಥೆಯಲ್ಲಿನ ಆಡಳಿತದ ಬಗ್ಗೆ ಸಾಕಷ್ಟು ಅನುಭವ ಇರುತ್ತದೆ. ಹಾಗೂ ಇಲ್ಲಿನ ಆಗು ಹೋಗುಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ಈ ಸಂಸ್ಥೆಗೆ 2005ರಲ್ಲಿ ಯು.ಜಿ.ಸಿ ಯಿಂದ ಸ್ವಾಯತ್ತತೆಯು ದೊರಕಿದ್ದು, ಪ್ರಸ್ತುತ ವಿಶ್ವವಿದ್ಯಾನಿಲದ ಆಡಳಿತದ ಅನ್ವಯ ಕಾರ್ಯನಿರ್ವಹಿಸುತ್ತಿರುತ್ತೇನೆ.

ಈ ಕುರಿತಂತೆ ಪ್ರತಿ ವರ್ಷವೂ ನಿಯಮಾನುಸಾರ ವಿಶ್ವವಿದ್ಯಾನಿಲಯದ ಲೆಕ್ಕಪರಿಶೋಧನ ವಿಭಾಗದಿಂದ ಲೆಕ್ಕ ಪರಿಶೋಧನ ಕಾರ್ಯವು ಸಹ ನಡೆಯುತ್ತಿರುವುದು ಸರಿಯಷ್ಟೆ. ಈ ಸಂಬಂಧ ಪ್ರಸ್ತುತ ಯುವರಾಜ ಕಾಲೇಜಿನಲ್ಲಿ ಲೆಕ್ಕ ಪರಿಶೋಧನ ಕಾರ್ಯವು ನಡೆಯುತ್ತಿರುತ್ತದೆ. ಈ ವೇಳೆಯಲ್ಲಿ ನಿಯಮಾನುಸಾರ ಕಾರ್ಯನಿರ್ವಹಕರು ಸಂಬಂಧಿಸಿದ ದಾಖಲೆಗಳನ್ನು ಸದರಿ ಸಮಿತಿಯ ಮುಂದೆ ಒದಗಿಸಬೇಕಾಗಿರುತ್ತದೆ. ಶ್ರೀ.ಶಿವಕುಮಾರ್.ಜೆರವರು ಕಾಲೇಜಿನಲ್ಲಿ ಕಾರ್ಯನಿರ್ವಹಕರಾಗಿ (ನಗದುಗಾರ/ಕ್ಯಾಷಿಯರ್) ಕಾರ್ಯನಿರ್ವಹಿಸುತ್ತಿದ್ದು, ಸಂಸ್ಥೆಯಲ್ಲಿನ ಸಂಬಂಧಿಸಿದ ಎಲ್ಲಾ ಹಣಕಾಸಿನ ವ್ಯವಹಾರಕ್ಕೆ ಚೆಕ್ ವಿತರಕರಾಗಿರುತ್ತಾರೆ. ಆದ್ದರಿಂದ ಸದರಿಯವರು ಲೆಕ್ಕ ಪರಿಶೋಧನ ಸಮಿತಿಯ ಮುಂದೆ ದಾಖಲೆಗಳನ್ನು ಒದಗಿಸುವುದು ಇವರ ಕರ್ತವ್ಯ ಮತ್ತು ಜವಾಬ್ದಾರಿಯಾಗಿರುತ್ತದೆ. ಆದರೆ ಶ್ರೀ.ಶಿವಕುಮಾರ್.ಜೆ ಲೆಕ್ಕ ಪರಿಶೋಧನ ಕಾರ್ಯಕ್ಕೆ ಸರಿಯಾಗಿ ಸಹಕರಿಸದೆ ಇಲ್ಲ ಸಲ್ಲದ ಸಬೂಬು ಹೇಳಿ ಜೊತೆಗೆ ಆಗಿಂದಾಗ್ಗೆ ರಜೆಯನ್ನು ಹಾಕಿ ನಿರ್ಲಕ್ಷ್ಯ ತೋರಿರುತ್ತಾರೆ. ಆದ ಕಾರಣ ನಾನು 19-12-2023 ಮತ್ತು 30-12-2023ರಂದು ಮೆಮೋ ನೀಡಿ, ಲೆಕ್ಕ ಪರಿಶೋಧನ ಸಮಿತಿಯ ಮುಂದೆ ಅಕೌಂಟ್‌ಗೆ ಸಂಬಂಧಿಸಿದ ಎಲ್ಲಾ ಕಡತ, ಚಲನ್, ರಶೀಧಿ, ಇತ್ಯಾದಿಗಳನ್ನು ಒದಗಿಸುವಂತೆ ಸೂಚಿಸಿರುತ್ತೇನೆ. ಆದರೂ ಸಹ ಸದರಿಯವರು ಈ ಸಂಬಂಧ ಲೆಕ್ಕ ಪರಿಶೋಧನ ಕಾರ್ಯಕ್ಕೆ ಸಹಕರಿಸದ ಕಾರಣ ಸಂಬಂಧಿಸಿದ ಲೆಕ್ಕ ಪರಿಶೋಧನ ಸಮಿತಿಯು ಮೌಖಿಕವಾಗಿ ದೂರು ಸಲ್ಲಿಸಿದಾಗ ಶ್ರೀ.ಶಿವಕುಮಾರ್.ಜೆ ರವರು ಸೇರಿದಂತೆ ಎಲ್ಲಾ ಕಾರ್ಯನಿರ್ವಹಕರಿಗೂ 30/12/2023ರಂದು ಮೆಮೋ ನೀಡಿ, ಲೆಕ್ಕ ಪರಿಶೋಧನ ಕಾರ್ಯಕ್ಕೆ ಸಹಕರಿಸುವಂತೆ ಸೂಚನೆ ನೀಡಿರುತ್ತೇನೆ. ಈತನ್ಮಧ್ಯೆ ಶ್ರೀ.ಶಿವಕುಮಾರ್.ಜೆ ದಿನಾಂಕ:03/01/2024ರಂದು ನನ್ನ ವಿರುದ್ಧ ಸುಳ್ಳು ಆರೋಪ ಮಾಡಿ, ಆತ್ಮಹತ್ಯೆ ಪತ್ರವನ್ನು ಬರೆದು ಆತ್ಮಹತ್ಯೆಗೆ ಪ್ರಯತ್ನಿಸಿರುತ್ತಾರೆ.

ಕಂಡಿಕೆ-2:ಮೈಸೂರು ವಿಶ್ವವಿದ್ಯಾನಿಲಯದ ಆಡಳಿತ ಸಿಬ್ಬಂದಿ ವರ್ಗದವರ ಸಂಘ (ರಿ) ಮತ್ತು ಶ್ರೀ.ಶಿವಕುಮಾರ್.ಜೆ ರವರ ಪತ್ನಿರವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಮನವಿಗಳ ಸಂಬಂಧ ಹಾಗೂ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಲಕ್ಷ್ಮೀಪುರಂ ಪೋಲಿಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಸತ್ಯಾಸತ್ಯತೆಗಳು ವಿಚಾರಣೆಯ ನಂತರವಷ್ಟೇ ಹೊರಬೀಳಲಿವೆ ಆದ ಕಾರಣ ಈ ಸಂಬಂಧದ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತದೆ.

ಕಂಡಿಕೆ-3:ಮೈಸೂರು ವಿಶ್ವವಿದ್ಯಾನಿಲಯವು ಸೇರಿದಂತೆ, ಯುವರಾಜ ಕಾಲೇಜಿನ ಅಧ್ಯಾಪಕೇತರ ಸಿಬ್ಬಂದಿಯು ಬಹುತೇಕ ತಾತ್ಕಾಲಿಕ ಸಿಬ್ಬಂದಿಯಾಗಿರುತ್ತಾರೆ. ಕಾಲೇಜಿನ ದೈನಂದಿನ ಕೆಲಸ ಕಾರ್ಯಗಳನ್ನು ಸದರಿ ಸಿಬ್ಬಂದಿಯವರೇ ನಡೆಸುವುದು ಮತ್ತು ಶಿಸ್ತು ತರುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸುವುದು ತುಂಬ ಕಷ್ಟವಾಗಿರುತ್ತದೆ. ಆದ ಕಾರಣ ಇವರುಗಳನ್ನು ಕರೆಯಿಸಿ ಬುದ್ಧಿವಾದ ಮಾತ್ರವೇ ಹೇಳಿ, ಕೆಲಸ ಮಾಡಿಸುವುದು ಅನಿವಾರ್ಯವಾಗಿರುತ್ತದೆ. ಏಕೆಂದರೆ ಇವರುಗಳ ವಿರುದ್ಧ ನಿಯಮಾನುಸಾರ ಯಾವುದೇ ರೀತಿಯ ಶಿಸ್ತುಕ್ರಮ ಜರುಗಿಸಲು ಸಾಧ್ಯವಿಲ್ಲ. ಆದ್ದರಿಂದ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ 56 ಉದ್ಯೋಗಿಗಳು ನನ್ನ ವಿರುದ್ಧ ಸಲ್ಲಿಸಿರುವ ಪತ್ರದ ಆರೋಪಗಳು ಸತ್ಯಕ್ಕೆ ದೂರವಾದುದ್ದು ಮತ್ತು ನನ್ನ ಮೇಲಿನ ಪಿತೂರಿಯಷ್ಟೆ, ಮುಂದುವರೆದು, ಕಾಲೇಜಿನಲ್ಲಿ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ.ಮಹೇಶ್ ಕುಮಾರ್ ರವರ ಆರೋಪಗಳು ಬರೀ ಹಸಿ ಸುಳ್ಳು ಮತ್ತು ಆಧಾರರಹಿತವಾದವುಗಳು.

ಕಾಲೇಜಿನಲ್ಲಿ ಯು.ಜಿ.ಸಿ ನವದೆಹಲಿಯಿಂದ ಕಾಲೇಜಿಗೆ ಬಿಡುಗಡೆಯಾಗಿರುವ ಕಾಲೇಜ್ ವಿತ್ ಪೋಟೆನ್ಷಿಯಲ್ ಫಾರ್ ಎಕ್ಸಲೆನ್ಸ್, (ಸಿ.ಪಿ.ಇ) ಅನುದಾನದಲ್ಲಿನ ಬಳಕೆಗೆ ಸಂಬಂಧಿಸಿದ 2021-22ರ ಸಾಲಿನಲ್ಲಿ ವ್ಯತ್ಯಾಸವಾಗಿರುವುದು ಕಂಡು

-180- ಬಂದಿರುತ್ತದೆ. ಆದಕಾರಣ ಸದರಿ ವಿಷಯ ಕುರಿತಂತೆ ವಿಚಾರಣೆ ನಡೆಸಲು ಮಾನ್ಯ ಕುಲಪತಿಗಳು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಮಿತಿಯೊಂದನ್ನು ರಚಿಸಿದ್ದು, ವಿಚಾರಣೆಯು ಪ್ರಗತಿಯ ಹಂತದಲ್ಲಿರುತ್ತದೆ. ಸದರಿ ವಿಷಯದ ಸಮಯದಲ್ಲಿ ಶ್ರೀ.ಮಹೇಶ್‌ಕುಮಾರ್‌ರವರು ಲೆಕ್ಕ ಅಧೀಕ್ಷಕರಾಗಿ ಕಾರ್ಯನಿರ್ವಹಿಸಿರುತ್ತಾರೆ. ಮತ್ತು ಈ ಸಂಬಂಧ ನಾನು ಸದರಿಯವರಿಗೆ ವಿಚಾರಣೆಗೆ ನಿಷ್ಪಕ್ಷವಾಗಿ ಸಹಕರಿಸುವಂತೆ ಸೂಚಿಸುತ್ತಿರುವುದರಿಂದ ನನ್ನ ಮೇಲೆ ಆರೋಪ ಮಾಡಿರುತ್ತಾರೆ. ಇವರ ಆರೋಪಗಳು ಕೇವಲ ಹಸಿ ಸುಳ್ಳು ಮತ್ತು ಆಧಾರರಹಿತವಾದವುಗಳು.

ಕಂಡಿಕೆ–4:ನಾನು ಕಾಲೇಜಿನ ಆಡಳಿತದ ಮತ್ತು ಶಿಸ್ತು ನಿರ್ವಹಣ ಹಿತದೃಷ್ಟಿಯಿಂದ ಯಾವ ಸಿಬ್ಬಂದಿಗೂ ತೊಂದರೆಯಾಗದಂತೆ ಕಾರ್ಯನಿರ್ವಹಿಸುತ್ತಿರುತ್ತೇನೆ. ಆದ ಕಾರಣ ನನ್ನ ಮೇಲಿನ ಆರೋಪಗಳು ಸತ್ಯಕ್ಕೆ ದೂರವಾದವುಗಳು ನಿರಾಧಾರ ಮತ್ತು ಅಸಮರ್ಥನೀಯವಾಗಿದ್ದು, ಕೇವಲ ನನ್ನ ಮೇಲಿನ ಪಿತೂರಿಯಷ್ಟೆ. ಆದ ಕಾರಣ ಈ ಮೇಲಿನ ಎಲ್ಲಾ ಗಮನಾರ್ಹ ಅಂಶಗಳ ಹಿನ್ನಲೆಯಲ್ಲಿ ತಮ್ಮ ಪತ್ರದಲ್ಲಿನ ನನ್ನ ವಿರುದ್ಧದ ಆರೋಪಗಳಿಗೆ ಯಾವುದೇ ಮನ್ನಣೆ ನೀಡದೆ ನನಗೆ ಕಾರ್ಯನಿರ್ವಹಿಸಿಕೊಂಡು ಹೋಗಲು ಸಹಕರಿಸುವಂತೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಸಂಬಂಧಿಸಿದ ದಾಖಲೆಗಳನ್ನು ಈ ಮೂಲಕ ತಮ್ಮ ಗಮನಕ್ಕೆ ಲಗತ್ತಿಸಿರುತ್ತೇನೆಂದು ತಿಳಿಸಿರುತ್ತಾರೆ" (ಆದರೆ ಸದರಿಯವರು ಸಲ್ಲಿಸಿರುವ ಪತ್ರದ ಜೊತೆಯಲ್ಲಿ ಯಾವುದೇ ದಾಖಲಾತಿಗಳನ್ನು ಲಗತ್ತಿಸಿಲ್ಲದಿರುವ ಅಂಶವನ್ನು ಅವಗಾಹನೆಗೆ ಸಲ್ಲಿಸಿದೆ). (ಅನುಬಂಧ–ಎ)

ವಿಶ್ವವಿದ್ಯಾನಿಲಯದ ವತಿಯಿಂದ ನೀಡಿದ್ದ ಕಾರಣ ಕೇಳುವ ನೋಟಿಸ್‌ಗೆ ಡಾ.ಹೆಚ್.ಸಿ.ದೇವರಾಜೇಗೌಡ, ಪ್ರಭಾರ ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮೇಲಿನಂತೆ ಸಲ್ಲಿಸಿರುವ ಉತ್ತರದೊಂದಿಗೆ ಪ್ರಸ್ತುತ ಈ ಪ್ರಕರಣದ ಸಂಬಂಧ ಸದರಿಯವರ ವಿರುದ್ಧ ಲಕ್ಷ್ಮೀಪುರಂ ಪೋಲಿಸ್ ಠಾಣೆಯಲ್ಲಿ ದೂರು ದಾಖಲಾಗಿರುವ ಅಂಶವನ್ನು ಅವಗಾಹನೆಗೆ ತರುತ್ತಾ, ಸಂಬಂಧಪಟ್ಟ ದಾಖಲೆ/ಅನುಬಂಧಗಳನ್ನು Mysore University Employees (Classification, Control and Appeal) Statutes 1983ರ (ಅನುಬಂಧ–ಏ) ಅಧಿನಿಯಮದೊಂದಿಗೆ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

| ವಿಶೇಷ ಸಭೆ<br><br>2024/Spl.1 | ಶ್ರೀ ಶಿವಕುಮಾರ್.ಜೆ., ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರು ಕಾಲೇಜಿನ ಆವರಣದಲ್ಲಿ ಆತ್ಮಹತ್ಯೆ ಪತ್ರವನ್ನು ಬರೆದಿಟ್ಟು ನಿದ್ರೆ ಮಾತ್ರೆಗಳನ್ನು ತೆಗೆದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿರುವ ಪ್ರಕರಣದ ಬಗೆಗೆ. |
|---|---|

ಕುಲಸಚಿವರು ಸದರಿ ಕಾರ್ಯಸೂಚಿಗೆ ಸಂಬಂಧಿಸಿದಂತೆ ವಿವರಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದರು.

ಶ್ರೀ ನಾಗರಾಜು .ಸಿ ಮಾತನಾಡಿ, ದಿನಾಂಕ: 03-01-2024ರ ಮುಂಚಿತವಾಗಿ ಪ್ರಾಂಶುಪಾಲರು ತೊಂದರೆ ನೀಡುತ್ತಿದ್ದಾರೆಂದು ಶ್ರೀ ಶಿವಕುಮಾರ್ ಅವರು ಗಮನಕ್ಕೆ ತಂದಿದ್ದಾರೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನನ್ನ ಗಮನಕ್ಕೆ ಯಾರು ತಂದಿರುವುದಿಲ್ಲ. ದಿನಾಂಕ : 3.1.2024ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆ ಮುಗಿದ ನಂತರ ಅಪರಾಹ್ನದಂದು ಗಮನಕ್ಕೆ ತರಲಾಯಿತು. ಅದಕ್ಕೂ ಮುಂಚೆ ಯಾರು ಗಮನಕ್ಕೆ ತಂದಿರುವುದಿಲ್ಲವೆಂದರು.

ಶ್ರೀ ನಟರಾಜು.ಹೆಚ್.ಎಸ್ ಅವರು ಮಾತನಾಡಿ, ಹಿಂದೆ ಏನಾದರೂ ಕಾಲೇಜಿನ ನೌಕರರು ವಾಸ್ತವವಾಗಿ ಪ್ರಾಂಶುಪಾಲರಿಂದ ಈ ರೀತಿಯ ತೊಂದರೆಯಾಗುತ್ತಿದೆ ಎಂದು ಮನವಿಯನ್ನು ಸಲ್ಲಿಸಿದ್ದಾರೆಯೇ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಈ ಘಟನೆ ನಡೆದ ನಂತರ ಮನವಿಯನ್ನು ಸಲ್ಲಿಸಿರುತ್ತಾರೆ ಹೊರತು ಮುಂಚಿತವಾಗಿ ಯಾವುದೇ ಮನವಿಯನ್ನು ಸಲ್ಲಿಸಿರುವುದಿಲ್ಲ. ಒಟ್ಟಾರೆಯಾಗಿ ಹೇಳುವುದಾದರೆ ಯುವರಾಜ ಕಾಲೇಜಿನ ಅಧ್ಯಾಪಕರುಗಳು ಹಾಗೂ ಅಧ್ಯಾಪಕೇತರ ಉದ್ಯೋಗಿಗಳು ಪ್ರಾಂಶುಪಾಲರಿಗೆ ವಿರುದ್ಧ ಮೌಖಿಕವಾಗಿ ದೂರಿರುತ್ತಾರೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ, ಪ್ರಾಂಶುಪಾಲರಾಗಿ ನೇಮಕಾತಿಯಾದ ದಿನಾಂಕ: 16-11-2022 ರಂದು ನಡೆದಂತಹ ಘಟನೆಯ ಮುಂಚೆ ಪ್ರಾಂಶುಪಾಲರ ವಿರುದ್ಧ ಯಾವುದಾದರೂ ದೂರುಗಳು ಬಂದಿದೆಯೇ, ಅಧಿಕಾರೇತರ ಹಾಗೂ ಅಧಿಕಾರಿ ಸಿಬ್ಬಂದಿಗಳು ದೂರು ನೀಡಿರುವ ವಿಷಯವು ದಿನಪತ್ರಿಕೆಯಲ್ಲಿ ಪ್ರಕಟವಾಗಿರುವುದು ತಿಳಿದು ಬಂದಿದೆ. ಈ ವಿಷಯವು ಯಾವುದೆಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, 45 ಉದ್ಯೋಗಿಗಳಿಗೆ 05 ತಿಂಗಳುಗಳಿಂದ ವೇತನ ಪಾವತಿಸಿರುವುದಿಲ್ಲವೆಂದು ದಿನಪತ್ರಿಕೆಯಲ್ಲಿ ವರದಿಯಾಗಿತ್ತು. ಯುವರಾಜ ಕಾಲೇಜು ಆಡಳಿತ ಮಂಡಳಿ ಸಭೆಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿ ವೇತನವನ್ನು ಪಾವತಿಸಲಾಯಿತು ಹಾಗೂ ವೇತನ ಪಾವತಿಸಿಲ್ಲದ ಕಾರಣದಿಂದ ಕಾಲೇಜಿನ ಉದ್ಯೋಗಿಗಳು ವಿರುದ್ಧವಾಗಿದ್ದಾರೆಂದು ಪ್ರಾಂಶುಪಾಲರು ಪತ್ರದಲ್ಲಿ ತಿಳಿಸಿರುತ್ತಾರೆಂದು ಸ್ಪಷ್ಟನೆ ನೀಡಿದರು.

ಶ್ರೀ ನಟರಾಜು .ಹೆಚ್.ಎಸ್. ಮಾತನಾಡಿ, ಕೇವಲ ಶಿವಕುಮಾರ್.ಜೆ ಒಬ್ಬರೇ ಈ ಆರೋಪವನ್ನು ಹೊರಿಸಿರುವುದಿಲ್ಲ. ಒಟ್ಟಾರೆ ಸಿಬ್ಬಂದಿ ವರ್ಗದವರು ಹಾಗೂ ಅತಿಥಿ ಉಪನ್ಯಾಸಕರುಗಳು ಸಹ ದೂರುಗಳನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಯುವರಾಜ ಕಾಲೇಜಿನ ಅಧ್ಯಾಪಕರು ಹಾಗೂ ಅಧ್ಯಾಪಕೇತರ ಉದ್ಯೋಗಿಗಳು ಮನವಿ ಪತ್ರ ಸಲ್ಲಿಸಿದ್ದು, ಪ್ರಾಂಶುಪಾಲರು ಬಳಸುವ ಭಾಷೆ ಸರಿಯಾಗಿರುವುದಿಲ್ಲವೆಂದು ಯುವರಾಜ ಕಾಲೇಜಿನ ಸಿಬ್ಬಂದಿಗಳೆಲ್ಲರು ಒಕ್ಕೊರಲಿನಿಂದ ಪ್ರಾಂಶುಪಾಲರ ವಿರುದ್ಧ ಕ್ರಮ ಜರುಗಿಸಬೇಕೆಂದು ತಿಳಿಸಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ನಾಗರಾಜು .ಸಿ ಅವರು ಮಾತನಾಡಿ, ಕರ್ತವ್ಯ ಸಂಘರ್ಷ ನಡೆಯುತ್ತಿದೆಯೇ? ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಶಿವಕುಮಾರ್.ಜೆ ಅವರು ಮೆಡಿಷನ್ ತೆಗೆದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ. ಅಂದರೆ ಎಷ್ಟು ತಿಂಗಳಿನಿಂದ ತೊಂದರೆ ಅನುಭವಿಸಿದ್ದಾರೆ ಎಂಬ ಸತ್ಯಾಸತ್ಯಾತೆಯನ್ನು ಪರಿಶೀಲಿಸಬೇಕು. ಇಂತಹ ವಿಷಯಗಳು ಪತ್ರಿಕೆಗಳಲ್ಲಿ "ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರಿಂದ ಹಲ್ಲೆ"ಯೆಂದು ಪ್ರಕಟವಾಗುತ್ತದೆ. ಇದರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪಾತ್ರವೇನಿರುವುದಿಲ್ಲ, ಆದರೂ ವಿಶ್ವವಿದ್ಯಾನಿಲಯವನ್ನು ಹೊಣೆಗಾರರನ್ನಾಗಿ ಮಾಡುತ್ತಾರೆ. ಶಿವಕುಮಾರ್.ಜೆ Death Note ಬರೆದಿದ್ದಾರೆ ಹಾಗೂ ಎಫ್ಐಆರ್ ಸಹ ಆಗಿರುವ ಹಿನ್ನೆಲೆಯಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕೆಂದು ಸಿಂಡಿಕೇಟಿನ ವಿಶೇಷ ಸಭೆಯನ್ನು ಕರೆಯಲಾಗಿದೆ ಎಂದರು.

ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ ಅವರು ಮಾತನಾಡಿ, ಈ ಘಟನೆ ನಡೆದ ನಂತರ ಸುಮಾರು ಬೆಳವಣಿಗೆಗಳಾಗಿವೆ. ಸಾಕಷ್ಟು ಕಿರುಕುಳ ಕೊಟ್ಟಿದ್ದರೆ ಮಾತ್ರ ಇಂತಹ ನಿರ್ಣಯವನ್ನು ತೆಗೆದುಕೊಳ್ಳಲು ಸಾಧ್ಯ. ಆದರೆ ಈ ಘಟನೆ ನಡೆಯುವ ಮುನ್ನ ವಿಶ್ವವಿದ್ಯಾನಿಲಯಕ್ಕೆ ಯಾವುದೇ ದೂರನ್ನು ಅವರು ಸಲ್ಲಿಸಿರುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ನಿರ್ಣಯಿಸುವುದು ಸೂಕ್ತ. ಶಿವಕುಮಾರ್.ಜೆ ಅವರು Death Note ಅನ್ನು ಅವರೇ ಬರೆದಿದ್ದಾರೆ. ಸಾಮಾನ್ಯವಾಗಿ ನಾನು ಸಾಹಿತ್ಯಕ ವಿದ್ಯಾರ್ಥಿಯಾಗಿರುವುದರಿಂದ ಗಮನಿಸುವುದೇನೆಂದರೆ, ನಾನು ಇಂತಹ ಸ್ಥಿತಿಯಲ್ಲಿದ್ದೇನೆ ಹಾಗೂ

ಈ ರೀತಿಯ ಕಿರುಕುಳವಾಗಿದೆಯೆಂದು Death Note ನಲ್ಲಿ ಅವರ ಸ್ಥಿತಿ ಬಗ್ಗೆ ಮೊದಲು ವಿವರಣೆ ಇರುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾಂಶುಪಾಲರು ಶಿವಕುಮಾರ್ .ಜೆ ಅವರಿಗೆ ಒಂದು ನೋಟಿಸ್ ಜಾರಿಗೊಳಿಸುತ್ತಾರೆ. ತದನಂತರ, ನೋಟಿಸ್ ಅನ್ನು ಹಿಂಪಡೆಯಲಾಗಿದೆಯೆಂದು ತಿಳಿಸಿದ್ದಾರೆ. ಒಂದು ನೋಟಿಸ್ ನೀಡುವ ಮುನ್ನ ಯೋಚನೆ ಮಾಡಬೇಕು ಎಂದರು.

ಶ್ರೀ ನಾಗರಾಜು.ಸಿ ಅವರು ಮಾತನಾಡಿ, ಎಷ್ಟು ನೋಟಿಸ್‌ಗಳನ್ನು ಜಾರಿ ಮಾಡಿರುತ್ತಾರೆಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಎರಡು ನೋಟಿಸ್‌ಗಳನ್ನು ಜಾರಿಗೊಳಿಸಿದ್ದಾರೆ. ಒಂದು ನೋಟಿಸ್ ಜಾರಿಗೊಳಿಸಿದ ನಂತರ ಇನ್ನೊಂದು ನೋಟಿಸ್ ನೀಡಿ ಹಿಂಪಡೆಯಲಾಗಿದೆಯೆಂದು ತಿಳಿಸಿರುತ್ತಾರೆ.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನೋಟಿಸ್ ಹಿಂಪಡೆಯುವುದಕ್ಕೆ ಕಾರಣವೇನೆಂದು ತಿಳಿಸಿರುವುದಿಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಯಾವ ಕಾರಣಗಳನ್ನು ನೀಡಿರುವುದಿಲ್ಲ. ಹಾಗೆಯೇ ಪೂರಕವಾದ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಪ್ರಾಂಶುಪಾಲರ ವರದಿಯನ್ನು ಗಮನಿಸಿದ್ದರೆ ಸುಮಾರು ವ್ಯಾಕರಣಗಳು ತಪ್ಪಾಗಿರುವುದು ಕಂಡುಬಂದಿದೆ. ಪ್ರಾಂಶುಪಾಲರು ಇವುಗಳನ್ನು ಗಮನಿಸಿ ವಿಶ್ವವಿದ್ಯಾನಿಲಯಕ್ಕೆ ವರದಿಯನ್ನು ಕಳುಹಿಸುವುದು ಸೂಕ್ತ. ಏಕೆಂದರೆ ಈ ವರದಿಗಳು ವಿಶ್ವವಿದ್ಯಾನಿಲಯಲ್ಲಿ ದಾಖಲೆಗಳಾಗಿರುತ್ತದೆ.

ಶ್ರೀ ಮಹದೇಶು ಅವರು ಮಾತನಾಡಿ, ನೈಜತೆಯಾಗಿ ತಿಳಿಸುವುದಾದರೆ 100 ನಿದ್ರೆ ಮಾತ್ರೆಗಳನ್ನು ತೆಗೆದುಕೊಂಡು ಯಾರೂ ಬದುಕುವುದು ಸಾಧ್ಯವಿಲ್ಲ. ಪ್ರಾಂಶುಪಾಲರು 02 ನೋಟಿಸ್‌ಗಳನ್ನು ಜಾರಿ ಮಾಡಿರುವುದು ತಿಳಿದುಬಂದಿದೆ. ಇವರೊಬ್ಬರಿಗೆ ಮಾತ್ರ ನೋಟಿಸ್ ಜಾರಿಗೊಳಿಸಿರುವುದನ್ನು ಗಮನಿಸಿದರೆ ಶಿವಕುಮಾರ್.ಜೆ ಕಛೇರಿ ಹಣ ದುರುಪಯೋಗ ಪಡಿಸಿಕೊಂಡಿರುವ ಅವಕಾಶವು ಇರಬಹುದು. ಕಾರಣ ಕೇಳುವುದು ಪ್ರಾಂಶುಪಾಲರ ಕರ್ತವ್ಯವಾಗಿರುತ್ತದೆ. ಇದನ್ನೆ ಮಾನದಂಡವನ್ನಾಗಿ ಮಾಡಿಕೊಂಡು ಏಕೆ ಆತ್ಮಹತ್ಯೆಗೆ ಪ್ರಯತ್ನಿಸಬಾರದು ಅಥವಾ ವೈಯಕ್ತಿಕ ಸಂಘರ್ಷಗಳು ಇರಬಹುದು ಎಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವೈದ್ಯಕೀಯ ವರದಿಯಲ್ಲಿ ಏನಿರಬಹುದೆಂದು ಕೇಳಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಶಿವಕುಮಾರ್.ಜೆ ಇವರು ಮಾತ್ರೆಗಳನ್ನು ಸೇವಿಸಿದ ತಕ್ಷಣ ಸಹೋದ್ಯೋಗಿಯು ಆಸ್ಪತ್ರೆಗೆ ಕೂಡಲೇ ದಾಖಲಿಸಿರುವುದು ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಪ್ರಾಣಕ್ಕೆ ಯಾವ ಅಪಾಯವು ಸಂಭವಿಸಿಲ್ಲ. ಒಂದು ವೇಳೆ ಮಾತ್ರೆಗಳನ್ನು ಸೇವಿಸಿ 2-3 ಗಂಟೆಗಳಾಗಿದ್ದರೆ, ಪ್ರಾಣಕ್ಕೆ ಅಪಾಯವಾಗುತ್ತಿತ್ತು ಎಂದು ತಿಳಿಸಿದರು.

ಡಾ. ಶಿಲ್ಪ ಜೆ. ಅವರು ಮಾತನಾಡಿ, ಮಾತ್ರೆಗಳನ್ನು ಸೇವಿಸಿದ ತಕ್ಷಣವೇ ಗಮನಿಸಿ ಆಸ್ಪತ್ರೆಗೆ ದಾಖಲಿಸಿರುವುದರಿಂದ, ಪ್ರಾಣಕ್ಕೆ ಯಾವುದೇ ಅಪಾಯವಾಗಿರುವುದಿಲ್ಲ. ಒಂದು ವೇಳೆ ಮಾತ್ರೆಗಳ ಅಂಶವು ರಕ್ತದಲ್ಲಿ ಸೇರ್ಪಡೆಯಾಗಿದ್ದಲ್ಲಿ ಜೀವಕ್ಕೆ ಅಪಾಯವಾಗುತ್ತಿತ್ತು ಎಂದು ತಿಳಿಸಿದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟ್ ಸದಸ್ಯರಾಗಿ ದಿನಾಂಕ: 05-01-2024 ರಂದು ವರದಿ ಮಾಡಿಕೊಂಡಿರುತ್ತೇನೆ. ಇದುವರೆವಿಗೂ 50 ಮಂದಿಯಾದರೂ ಶಿವಕುಮಾರ್.ಜೆ ಆತ್ಮಹತ್ಯೆಗೆ ಸಂಬಂಧಿಸಿದಂತೆ ನನ್ನ ಬಳಿ ಚರ್ಚಿಸಿರುತ್ತಾರೆ. ಪ್ರಾಂಶುಪಾಲರು ಕಿರುಕುಳ ನೀಡಿರುತ್ತಾರೆಂದು ಒಟ್ಟಾರೆ ಎಲ್ಲರೂ ತಿಳಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯವು 100 ವರ್ಷಗಳ ಇತಿಹಾಸವಿರುವ ವಿಶ್ವವಿದ್ಯಾನಿಲಯವಾಗಿದ್ದು, ವಿಶ್ವವಿದ್ಯಾನಿಲಯದ ಉದ್ಯೋಗಿಯು ಆತ್ಮಹತ್ಯೆಗೆ ಪ್ರಯತ್ನಿಸಿರುವುದಕ್ಕೆ ವಿಶ್ವವಿದ್ಯಾನಿಲಯವು ತೆಗೆದುಕೊಂಡಿರುವ ತೀರ್ಮಾನವೇನೆಂದು ಯಕ್ಷಪ್ರಶ್ನೆಯಾಗಿದೆ. ಮೇಲ್ನೋಟಕ್ಕೆ ಪ್ರಾಂಶುಪಾಲರು ತಪ್ಪಿತಸ್ಥರೆಂದು ಕಂಡು ಬರುತ್ತಿದೆ. ಆದರೆ ಯಾವುದೇ ವಿಷಯವನ್ನು ಪ್ರತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡಬೇಕು. ಈ ಸಂಬಂಧ ಸಮಿತಿಯನ್ನು ರಚನೆ ಮಾಡಿ, ಸಮಿತಿಯ ಶಿಫಾರಸ್ಸಿನನ್ವಯ ಕ್ರಮವಹಿಸುವುದು ಸೂಕ್ತವೆಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಹಿಂದೆ ಪೋಲೀಸ್ ಸ್ಟೇಷನ್‌ನಲ್ಲಿ ಅಧಿಕಾರಿ ಮೇಲೆ ಎಫ್‌ಐಆರ್ ಆದಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ನಿಯಮಗಳ ಪ್ರಕಾರ ಯಾವ ಕ್ರಮವನ್ನು ಪಾಲಿಸಲಾಗುತ್ತದೆ ಎಂದು ಪ್ರಶ್ನಿಸಿದರು.

ಕುಲಸಚಿವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆಯನ್ವಯ ಪಾಲನೆ ಮಾಡಲಾಗಿದೆ ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ, ಪ್ರಾಂಶುಪಾಲರ ಮೇಲೆ ಎಫ್‌ಐಆರ್ ದಾಖಲಾಗಿದೆ. ಎಫ್‌ಐಆರ್ ಆದ ಮೇಲೆ ಪೋಲೀಸ್ ಸ್ಟೇಷನ್‌ನಿಂದ ತನಿಖೆಯಾಗುತ್ತದೆ. ಸಿಂಡಿಕೇಟ್ ಸಭೆಯಲ್ಲಿ ಒಂದು ನಿರ್ಧಾರ ತೆಗೆದುಕೊಳ್ಳುತ್ತೇವೆ. ಒಂದು ವೇಳೆ ಸಿಂಡಿಕೇಟ್ ಸಭೆಯ ನಿರ್ಧಾರದ ತದ್ವಿರುದ್ಧ ಪೋಲೀಸ್ ಸ್ಟೇಷನ್‌ನಿಂದ ವರದಿ ಬಂದ ಸಂದರ್ಭದಲ್ಲಿ

ವಿಶ್ವವಿದ್ಯಾನಿಲಯವು ನೀಡುವ ಉತ್ತರವೇನೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಪೊಲೀಸ್ ಸ್ಟೇಷನ್‌ನಿಂದ ತನಿಖೆ ಮಾಡಿ ತೆಗೆದುಕೊಳ್ಳುವ ನಿರ್ಧಾರಕ್ಕೆ ನಾವು ಬದ್ಧರಾಗಿ ಕ್ರಮ ಜರುಗಿಸಬೇಕಾಗುತ್ತದೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಪ್ರಸ್ತುತ ಯುವರಾಜ ಕಾಲೇಜಿನ ಪ್ರಾಂಶುಪಾಲರು ಪ್ರಭಾರ ಹುದ್ದೆಯಲ್ಲಿದ್ದಾರೆ. ಪ್ರಾಂಶುಪಾಲರ ಮೇಲೆ ಆರೋಪ ಮಾಡಲಾಗಿದೆ. ಅವರು ಸಮಜಾಯಿಷಿ ನೀಡುವುದನ್ನು ಗಮನಿಸಿದರೆ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿರುವುದಾಗಿದೆ. ಶಿವಕುಮಾರ್.ಜೆ ಅವರು ಆತ್ಮಹತ್ಯೆಗೆ ಪ್ರಯತ್ನಿಸಿದ್ದರೆಂದು ಮಾನವೀಯತೆ ದೃಷ್ಟಿಯಿಂದ ನೋಡುವುದಾದರೆ, ಹಾಗೂ ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಗಮನಿಸುವುದಾದರೆ ತಪ್ಪು ಮಾಡಿದ್ದನ್ನು ಮುಚ್ಚಿ ಹಾಕುವುದಕ್ಕೆ ಆತ್ಮಹತ್ಯೆಗೆ ಪ್ರಯತ್ನಿಸಿರಬಹುದು ಎನಿಸುತ್ತದೆ. ಸಂಪೂರ್ಣ ವಿಚಾರಣೆ ಮಾಡಬೇಕು. ನಿವೃತ್ತ ಪೊಲೀಸ್ ಅಧಿಕಾರಿ ಅಥವಾ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ಮಾಡಿಸಬೇಕು. ಪ್ರಾಂಶುಪಾಲರ ಹುದ್ದೆಯಲ್ಲೆ ಇದ್ದು ತನಿಖೆ ನಡೆಸುವುದಕ್ಕೆ ಸಹಕಾರ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ನಿಷ್ಪಕ್ಷಪಾತವಾಗಿ ತನಿಖೆ ಮಾಡುವುದಕ್ಕೆ ಆಸ್ಪದವಾಗುವುದಿಲ್ಲ. ಪ್ರಾಂಶುಪಾಲರನ್ನು ತಾತ್ಕಾಲಿಕವಾಗಿ ಬೇರೆ ಕಡೆಗೆ ನಿಯೋಜನೆ ಮಾಡುತ್ತೀರೋ ಎಂದು ಕೇಳುತ್ತಾ, ಪ್ರಸ್ತುತ ಅಮಾನತು ಎನ್ನುವುದು ಸರ್ವೇ ಸಾಮಾನ್ಯವಾಗಿದೆ. ಅಮಾನತು ಮಾಡಿದ ನಂತರ ತನಿಖೆಯಲ್ಲಿ ತಪ್ಪಿರುವುದಿಲ್ಲವೆಂದು ವರದಿ ಬಂದಾಗ ಅಮಾನತು ಮಾಡಿರುವ ಆದೇಶವನ್ನು ಹಿಂಪಡೆಯಲಾಗುವುದು. ಆದರೆ ಸೇವಾ ಪುಸ್ತಕದಲ್ಲಿ ಇಂತಹ ಅವಧಿಯಲ್ಲಿ ಅಮಾನತು ಮಾಡಲಾಗಿದೆಯೆಂದು ದಾಖಲು ಮಾಡಲಾಗಿರುತ್ತದೆ. ಇದರ ಬದಲು ಒಂದು ಸಂಪೂರ್ಣ ತನಿಖೆ ನಡೆಸಿದ ನಂತರ ಅಮಾನತು ಮಾಡುವುದೋ ಅಥವಾ ಬೇಡವೋ ಎಂಬುದನ್ನು ಕ್ರಮ ತೆಗೆದುಕೊಂಡರೆ ಸೂಕ್ತವೆಂದರು. ಸದ್ಯಕ್ಕೆ ಪ್ರಾಂಶುಪಾಲರ ಹುದ್ದೆಯಿಂದ ವಿಮುಕ್ತಿಗೊಳಿಸಿ, ಶಿವಕುಮಾರ್.ಜೆ ಮೇಲೂ ತನಿಖೆ ಮಾಡಬೇಕು. ಏಕೆಂದರೆ ಶಿವಕುಮಾರ್.ಜೆ ಇವರಿಗೆ ಎರಡು ನೋಟಿಸ್‌ಗಳನ್ನು ಜಾರಿಗೊಳಿಸಲಾಗಿದೆ. ನಿಜಕ್ಕೂ ಆ ನೋಟಿಸ್ ಕಿರುಕುಳ ನೀಡುವ ನೋಟಿಸ್ ಆಗಿದ್ದರೆ, ಮಾನ್ಯ ಕುಲಪತಿಗಳ ಅಥವಾ ಕುಲಸಚಿವರ ಗಮನಕ್ಕೆ ತರಬಹುದಾಗಿತ್ತು. ಈ ಸಂದರ್ಭದಲ್ಲಿ ಎರಡು ನೋಟಿಸ್‌ಗಳನ್ನು ಪಡೆದ ನಂತರ ಮೌಖಿಕವಾಗಿ ತಿಳಿಸಿರುತ್ತೇನೆಂದು ಸಮಜಾಯಿಷಿ ನೀಡಿದ್ದಾರೆ. ಇಬ್ಬರ ನಡುವೆ ನಡೆದಿರುವ ಒಟ್ಟಾರೆ ಘಟನೆಗಳನ್ನು ಸಮಗ್ರವಾಗಿ ಹೊರತರಬೇಕು. ಈ ಸಂಬಂಧ ಮೂರನೇ ವ್ಯಕ್ತಿಯ ವಿಚಾರಣೆ ನಡೆಸಿದರೆ ಸೂಕ್ತವೆಂದು ಅಭಿಪ್ರಾಯಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ, ಶ್ರೀ ಗೋಕುಲ್ ಗೋವರ್ಧನ್ ಅವರು ಪ್ರಸ್ತಾಪಿಸಿರುವ ಅಂಶವು ಶೇ.100 ರಷ್ಟು ಸತ್ಯವಾಗಿದೆಯೆಂದರು.

ಶ್ರೀ ನಟರಾಜು .ಹೆಚ್.ಎಸ್. ಅವರು ಮಾತನಾಡಿ. ಸಭೆಯಲ್ಲಿ ಯಾವುದೇ ರೀತಿಯ ತೀರ್ಮಾನವಾಗದಿದ್ದ ಸಂದರ್ಭಧಲ್ಲಿ ಮಾತ್ರ ಸಮಿತಿ ರಚಿಸಬೇಕು. ವಿಶ್ರಾಂತ ಪ್ರಾಂಶುಪಾಲರಾದ ಡಾ. ಯಶೋಧ ಅವರು ಸಹ ಬೇರೆ ಬೇರೆ ಆರೋಪಗಳನ್ನು ಮಾಡಿದ್ದರೆಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿದರು. ಒಟ್ಟಾರೆ ಸಿಬ್ಬಂದಿ ವರ್ಗದವರು ಮತ್ತು ಅಧ್ಯಾಪಕೇತರ ಸಂಘದವರು ಪ್ರಸ್ತುತ ಪ್ರಾಂಶುಪಾಲರ ವಿರುದ್ಧ ದೂರುಗಳನ್ನು ಸಲ್ಲಿಸಿರುತ್ತಾರೆ. ಹಲವಾರು ವರ್ಷಗಳಿಂದ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಿವಕುಮಾರ್.ಜೆ ಅವರು ಪ್ರಾಂಶುಪಾಲರು ಕಿರುಕುಳ ನೀಡುತ್ತಿದ್ದಾರೆಂದು Death Note ನಲ್ಲಿ ತಿಳಿಸುವುದರೊಂದಿಗೆ ಮಗ ಮತ್ತು ಪತ್ನಿಯನ್ನು ನೆನಪು ಮಾಡಿಕೊಂಡು ನಾನು ಸಾಯುತ್ತಿದ್ದೇನೆ ಕ್ಷಮಿಸಬೇಕೆಂದು ತುಂಬಾ ಭಾವನಾತ್ಮಕವಾಗಿ ಬರೆದಿದ್ದಾರೆ. ಕಿರುಕುಳ ನೀಡಿಲ್ಲದಿದ್ದರೆ ಈ ಮಟ್ಟಕ್ಕೆ ಇಳಿಯುತ್ತಿರಲಿಲ್ಲವೆಂದರು.

ಶ್ರೀ ಮಹದೇಶು ಮಾತನಾಡಿ, ವಿಶ್ವವಿದ್ಯಾನಿಲಯದ ಘನತೆ ಉಳಿಯಬೇಕು. ಒಂದು ವೇಳೆ ಶಿವಕುಮಾರ್.ಜೆ ಅವರು ಕಛೇರಿ ಕರ್ತವ್ಯದಲ್ಲಿ ಏನಾದರೂ ಲೋಪವೆಸಗಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದರೆ ಕನಿಕರ ತೋರಿಸಬಹುದೆಂದು ಅರ್ಥವಲ್ಲ. ಪತ್ನಿ ಮತ್ತು ಮಗನನ್ನು ನೆನಪು ಮಾಡಿಕೊಳ್ಳುವುದು ವೈಯಕ್ತಿಕ ವಿಚಾರ. ಈ ವಿಚಾರದಲ್ಲಿ ಯಾರನ್ನೂ ಬಲಿಪಶು ಮಾಡಬಾರದು. ಪ್ರಾಂಶುಪಾಲರು ಹಲವಾರು ವರ್ಷಗಳಿಂದ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ದೂರನ್ನು ಹೊರತುಪಡಿಸಿದರೆ ಅವರ ವಿರುದ್ಧ ಯಾವುದೇ ದೂರುಗಳಿರುವುದಿಲ್ಲವೆಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ದಿನಾಂಕ: 16-11-2021ರಲ್ಲಿ ಯುವರಾಜ ಕಾಲೇಜಿನಲ್ಲಿರುವ ಅಧ್ಯಾಪಕರುಗಳು ಪ್ರಾಂಶುಪಾಲರ ವಿರುದ್ಧ ದೂರಿನ ಮನವಿ ಸಲ್ಲಿಸಿರುತ್ತಾರೆ. ಅದರ ಪ್ರತಿ ಇರುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಶೈಕ್ಷಣಿಕ ಹಿತದೃಷ್ಟಿಯಿಂದ ಇಂತಹ ಘಟನೆಗಳು ನಡೆಯಬಾರದು. ಈ ಘಟನೆಯ ಸಂಬಂಧ ಕ್ರಮ ಜರುಗಿಸಬೇಕು, ಇಲ್ಲವಾದಲ್ಲಿ ನಿರಂತರವಾಗಿ ನಡೆಯುತ್ತದೆ. ಈ ವಿಷಯದಲ್ಲಿ ಏಕಪಕ್ಷಿಯ ನಿರ್ಧಾರ ತೆಗೆದುಕೊಳ್ಳುವ ಬದಲು ವಿಶ್ವವಿದ್ಯಾನಿಲಯದ ಒಳಿತಿಗಾಗಿ ಸರ್ವಾನುಮತದಿಂದ ನಿರ್ಣಯ ತೆಗೆದುಕೊಳ್ಳುವುದು ಸೂಕ್ತವೆಂದು ಸಿಂಡಿಕೇಟ್ ವಿಶೇಷ ಸಭೆಯನ್ನು ಕರೆಯಲಾಗಿದೆ ಎಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಎರಡು ಕಡೆ ವಿಚಾರಣೆ ನಡೆಸಬೇಕು. ಇಂತಹ ಸಂದರ್ಭಗಳಿದ್ದಾಗ ಸರ್ಕಾರದ ಮಟ್ಟದಲ್ಲಾಗಲೀ ಅಥವಾ ಅಧಿಕಾರಿ ಮಟ್ಟದಲ್ಲಾಗಲೀ, ಆ ಸ್ಥಾನದಿಂದ ಕೆಳಗಿಳಿಸಿ ವಿಚಾರಣೆ ಮಾಡುವುದು

-184-

ಸಂಪ್ರದಾಯವಾಗಿದೆ. ಅದೇ ಸಂಪ್ರದಾಯವನ್ನು ಇಲ್ಲಿಯೂ ಪಾಲನೆ ಮಾಡೋಣವೆಂದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಅಮಾನತು ಎನ್ನುವ ಪದವನ್ನು ಹೊರತುಪಡಿಸಿ, ಪ್ರಾಂಶುಪಾಲರನ್ನು ಮಾತೃ ವಿಭಾಗಕ್ಕೆ ವರ್ಗಾಯಿಸಿ ನಂತರ ವಿಚಾರಣೆ ನಡೆಸಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುವುದು ಸೂಕ್ತ. ಇಬ್ಬರ ಮೇಲೂ ವಿಚಾರಣೆ ಮಾಡಬೇಕು. ಈ ಸಂಬಂಧ ಸಮಿತಿ ರಚನೆ ಮಾಡಿ, ಸಮಿತಿಯ ಶಿಫಾರಸ್ಸಿನನ್ವಯ ಕ್ರಮವಹಿಸಬೇಕೆಂದರು.

ಶ್ರೀ ಮಹದೇಶು ಅವರು ಮಾತನಾಡಿ, ಪ್ರಾಂಶುಪಾಲರು ಮತ್ತು ಶಿವಕುಮಾರ್.ಜೆ ಈ ಇಬ್ಬರ ಮೇಲೂ ವಿಚಾರಣೆ ನಡೆಸಬೇಕೆಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಯುವರಾಜ ಕಾಲೇಜು ಬೋಧಕವರ್ಗ, ಬೋಧಕೇತರ ವರ್ಗ, ಕಾನೂನು ತಜ್ಞರು ಮತ್ತು ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಒಂದು ಸಮಗ್ರವಾದ ಸಮಿತಿ ರಚಿಸಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸರ್ಕಾರದ ಸುತ್ತೋಲೆಯನ್ವಯ ವಿಶ್ವವಿದ್ಯಾಲಯಗಳ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ಸದಸ್ಯ/ಅಧ್ಯಕ್ಷರನ್ನಾಗಿ ನೇಮಿಸದೇ ವಿಷಯ ಪರಿಣಿತರನ್ನು/ಶಿಕ್ಷಣ ತಜ್ಞರನ್ನು ನೇಮಿಸಲು ಸೂಚಿಸಲಾಗಿದೆ. ಇದು ಹಿತಾಸಕ್ತಿ ಸಂಘರ್ಷಕ್ಕೂ ಕಾರಣವಾಗುತ್ತದೆ. ಸದರಿ ಪ್ರಕರಣದಲ್ಲಿ ಶಿಸ್ತುಕ್ರಮ ಜರುಗಿಸುವ ಸಂಭವವಿರುವುದರಿಂದ ವಿಶ್ವವಿದ್ಯಾನಿಲಯದ ಅಧಿನಿಯಮ ಆಧರಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಕುಲಸಚಿವರು ತಿಳಿಸಿರುವುದು ಸರಿಯಾಗಿದೆ. ಸಮಿತಿಯನ್ನು ರಚಿಸುವುದಕ್ಕೆ ಹೆಚ್ಚಿನ ಅವಧಿ ತೆಗೆದುಕೊಂಡಷ್ಟು ವಿಷಯಗಳು ಬೇರೆ ವಿಷಯಾಂತರಗಳಾಗುತ್ತವೆ. ಜರೂರಾಗಿ ಸಮಿತಿ ರಚನೆ ಮಾಡಿ, ವಿಚಾರಣೆ ಪೂರ್ಣಗೊಳಿಸಿ, ಸಮಿತಿಯು ಸಲ್ಲಿಸುವ ವರದಿಯನ್ವಯ ಕ್ರಮವಹಿಸುವುದು ಸೂಕ್ತವೆಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ನಿಯಮದನ್ವಯ ಸಮಿತಿ ರಚಿಸುವುದು ಸೂಕ್ತ. ಸಮಿತಿಯಲ್ಲಿ ಸಹಜವಾಗಿ ನಾವುಗಳಿದ್ದರೆ ಪ್ರಭಾವ ಬೀರಬಹುದು. ಇದರಿಂದ ಹೊರತಾಗಿರೋಣವೆಂದರು. ವಿಚಾರಣೆಗೆ ನಿಗದಿತ ಅವಧಿಯನ್ನು ನಿಗಧಿಪಡಿಸಿ, ನಿರ್ಧಿಷ್ಟ ಸಮಯದೊಳಗೆ ವರದಿ ಸಲ್ಲಿಸಲು ನಿರ್ದೇಶನ ನೀಡಬೇಕೆಂದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ವಿಚಾರಣೆಯನ್ನು ಪೂರ್ಣಗೊಳಿಸಿ ವರದಿಯನ್ನು ನೀಡುವುದಕ್ಕೆ ನಿಗದಿತ ಅವಧಿಯನ್ನು ನಿಗದಿಪಡಿಸಬೇಕೆಂದರು.

ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ಅವರು ಮಾತನಾಡಿ, ಪ್ರಾಂಶುಪಾಲರನ್ನು ಸ್ವಲ್ಪ ಅವಧಿಯವರೆಗೆ ರಜೆಯ ಮೇಲೆ ತೆರಳುವಂತೆ ನಿರ್ದೇಶಿಸಿ, ಆ ಅವಧಿಯಲ್ಲಿ ತ್ವರಿತವಾಗಿ ವಿಚಾರಣೆಯನ್ನು ನಡೆಸಬೇಕು. ವಿಚಾರಣೆಯ ವಾಸ್ತವಾಂಶದ ಆಧಾರದ ಮೇಲೆ ನಿರ್ಣಯ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಮತ್ತು ಡಾ. ಬಸವರಾಜು .ಸಿ ಅವರುಗಳು ಮಾತನಾಡಿ, ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಇವರಿಬ್ಬರನ್ನು ವಿಚಾರಣೆ ನಡೆಸಿ, ವಿಚಾರಣೆ ಪೂರ್ಣಗೊಂಡು ವರದಿ ಸಲ್ಲಿಸುವವರೆಗೆ ಕಡ್ಡಾಯ ರಜೆಯನ್ನು ಕಳುಹಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಇವರಿಬ್ಬರನ್ನೊಳಗೊಂಡಂತೆ ಸಂಪೂರ್ಣ ತನಿಖೆ ನಡೆಸಿ ನಿರ್ಧಿಷ್ಟ ನಿರ್ಣಯವನ್ನು ತೆಗೆದುಕೊಳ್ಳಬೇಕು. ಸಿಂಡಿಕೇಟ್ ಸಭೆಯು ಕಠಿಣ ಕ್ರಮ ತೆಗೆದುಕೊಳ್ಳುತ್ತದೆಂದು ಮನವರಿಕೆಯೊಂದಿಗೆ ಪುನಃ ಇಂತಹ ಘಟನೆಗಳು ವಿಶ್ವವಿದ್ಯಾನಿಲಯದಲ್ಲಿ ನಡೆಯಬಾರದು. ಪ್ರಾಂಶುಪಾಲರ ಹುದ್ದೆಯು ಪ್ರಭಾರ ಹುದ್ದೆಯಾಗಿರುತ್ತದೆ. ಹಿಂದಿನಿಂದಲೂ ಜೇಷ್ಠತಾ ಪಟ್ಟಿಯಲ್ಲಿ ಸೇವಾ ಹಿರಿತನವನ್ನು ಆಧಾರವಾಗಿಟ್ಟುಕೊಂಡು ಪ್ರಾಂಶುಪಾಲರನ್ನು ನೇಮಕಾತಿ ಮಾಡಲಾಗುತ್ತಿದೆ ಮತ್ತು ಇತ್ತೀಚಿಗೆ ನ್ಯಾಕ್‌ಗೊಳಪಟ್ಟ ಸಂದರ್ಭದಲ್ಲಿ ನಾನು ಹಾಗೂ ಕುಲಸಚಿವರು ಯುವರಾಜ ಕಾಲೇಜಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಕಾಲೇಜಿನ ಬೋಧಕ ಮತ್ತು ಬೋಧಕೇತರರು ಪ್ರಾಂಶುಪಾಲರ ವಿರುದ್ಧ ಅನೇಕ ದೂರುಗಳನ್ನು ಮೌಖಿಕವಾಗಿ ತಿಳಿಸಿದ್ದರೇ ಹೊರತು ಲಿಖಿತವಾಗಿ ಯಾರು ದೂರನ್ನು ಸಲ್ಲಿಸಿರುವುದಿಲ್ಲ. ಆ ಸಂದರ್ಭದಲ್ಲಿ ಸ್ವಾಯತ್ತ ಕಾಲೇಜಾದ ಯುವರಾಜ ಕಾಲೇಜನ್ನು ನ್ಯಾಕ್‌ಗೊಳಪಡಿಸುವಾಗ ಯಾರ ಅಭಿಪ್ರಾಯವನ್ನು ಏಕೆ ಪಡೆಯಲಿಲ್ಲವೆಂದು ಪ್ರಾಂಶುಪಾಲರಿಗೆ ಪ್ರಶ್ನಿಸಲಾಯಿತು. ಆಗ ಎಲ್ಲಾ ಅಧ್ಯಾಪಕರುಗಳು ಪ್ರಾಂಶುಪಾಲರು ಯಾವುದೇ ನಿರ್ಣಯ ತೆಗೆದುಕೊಂಡರೂ ಯಾರ ಅಭಿಪ್ರಾಯವನ್ನು ಪಡೆಯದೇ ಏಕಪಕ್ಷೀಯವಾಗಿ ನಿರ್ಣಯ ತೆಗೆದುಕೊಳ್ಳುತ್ತಾರೆಂದು ಅಸಮಾಧಾನವನ್ನು ವ್ಯಕ್ತಪಡಿಸಿದರು. ಇದನ್ನೆಲ್ಲಾ ಗಮನಿಸಲಾಗಿ ಸದ್ಯದಲ್ಲೇ ಸಭೆಯನ್ನು ಕರೆಯಲಾಗುವುದೆಂದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಮುಂದೆ ಇನ್ಯಾವುದೇ ಕಾರಣಕ್ಕೂ ಈ ರೀತಿಯ ಸಮಸ್ಯೆಗಳು ಎದುರಾಗಬಾರದು. ವಿಚಾರಣಾ ಅವಧಿಯಲ್ಲಿ ಪ್ರಾಂಶುಪಾಲರನ್ನು ಮಾತೃ ವಿಭಾಗಕ್ಕೆ ಕಳುಹಿಸಿದಾಗ, ಅಲ್ಲಿಯೂ ಸೇವಾ ಹಿರಿತನ ಆಧಾರದ ಮೇಲೆ ಯುವರಾಜ ಕಾಲೇಜಿಗೆ ಇವರನ್ನು ಪ್ರಾಂಶುಪಾಲರಾಗಿ ನೇಮಕ ಮಾಡಲಾಗುತ್ತದೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾಂಶುಪಾಲರನ್ನು ಮಾತ್ರ ವಿಭಾಗಕ್ಕೆ ವರ್ಗಾಯಿಸಿದ್ದರೆ, ಅವರು ಯುವರಾಜ ಕಾಲೇಜಿನ ವಿಭಾಗದಲ್ಲಿ ಉಪಸ್ಥಿತರಿರುತ್ತಾರೆ. ಆದ್ದರಿಂದ ವಿಚಾರಣೆ ಮುಗಿಯುವವರೆಗೂ ಪ್ರಾಂಶುಪಾಲರಿಗೆ ಕಡ್ಡಾಯ ರಜೆಯ ಮೇಲೆ ತೆರಳಲು ಸೂಚಿಸಲಾಗುವುದು. ಆ ಅವಧಿಯಲ್ಲಿ ಯುವರಾಜ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾಗಿ ಕಾಲೇಜಿನ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ವಿಚಾರಣೆಯನ್ನು ಜರೂರಾಗಿ ನಡೆಸಲಾಗುವುದೆಂದು ತಿಳಿಸಿದರು.

ಶ್ರೀ ನಟರಾಜು .ಹೆಚ್.ಎಸ್. ಅವರು ಮಾತನಾಡಿ, ಈ ವಿಚಾರಣೆಯು ನಿಷ್ಪಕ್ಷಪಾತವಾಗಿ ನಡೆಯಬೇಕು. ಏಕೆಂದರೆ, ವಿವಿ ಸಂಜೆ ಕಾಲೇಜಿನಲ್ಲಿನ ಪ್ರಾಧ್ಯಾಪಕರಾದ ಪ್ರೊ. ರಾಚಯ್ಯ ಅವರನ್ನು ಅಸ್ಪೃಶ್ಯ ಎಂದು ಕರೆದುದಾಗಿ ಪ್ರಾಂಶುಪಾಲರಾದ ಡಾ. ದೇವರಾಜೇಗೌಡ ಇವರ ವಿರುದ್ಧ ಆರೋಪ ಮಾಡಿದ್ದಾರೆ. ಶಿವಕುಮಾರ್ .ಜೆ ಮಾತ್ರವಲ್ಲ, ಅವರೊಂದಿಗೆ ಕಾರ್ಯನಿರ್ವಹಿಸುತ್ತಿದ್ದ ಅಧ್ಯಾಪಕರುಗಳು ಮತ್ತು ಉದ್ಯೋಗಿಗಳು ಸಹ ಪ್ರಾಂಶುಪಾಲರ ವಿರುದ್ಧ ಆರೋಪ ಮಾಡಿರುತ್ತಾರೆ. ಈ ಬಗ್ಗೆ ಮಾನ್ಯ ರಾಜ್ಯಪಾಲರಿಗೂ ಪತ್ರ ಬರೆದಿರುವುದು ತಿಳಿದುಬಂದಿದೆ. ಶಿವಕುಮಾರ್ .ಜೆ ಆತ್ಮಹತ್ಯೆ ಪ್ರಯತ್ನ ಮಾಡಿರುವುದು ನಿಜಕ್ಕೂ ವಿಶ್ವವಿದ್ಯಾನಿಲಯಕ್ಕೆ ಅವಮಾನಕರ ವಿಷಯವಾಗಿದೆ. ಏಕೆಂದರೆ ಆಡಳಿತದಲ್ಲಿ ಪೂರಕವಾದ ವಾತಾವರಣವಿರಬೇಕು. ಇದನ್ನೆಲ್ಲಾ ಗಮನಿಸಿದರೆ ಯುವರಾಜ ಕಾಲೇಜಿನ ಆಡಳಿತವು ಉತ್ತಮವಾಗಿಲ್ಲವೆಂದು ತಿಳಿಸಿದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಸಮಿತಿ ರಚಿಸಿ ವಿಚಾರಣಾ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರ ಕಠಿಣವಾದ ತೀರ್ಮಾನ ತೆಗೆದುಕೊಳ್ಳಬೇಕು. ವಿಚಾರಣೆ ನಡೆಸುವುದಾದರೆ ಯಾರಿಗೂ ಕಿಂಚಿತ್ತು ಪರ-ವಿರೋಧಗಳಿಲ್ಲದೆ ನಿಷ್ಪಕ್ಷಪಾತವಾಗಿ ನಡೆಯಬೇಕು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತವಿರುವ ಅಧಿಕಾರಿ ವರ್ಗ ಮತ್ತು ಸಿಂಡಿಕೇಟ್ ಸಭೆಯು ತೆಗೆದುಕೊಳ್ಳುವ ತೀರ್ಮಾನವು ಎಲ್ಲರಿಗೂ ಮಾದರಿಯಾಗಿರಬೇಕೆಂದರು.

ಶ್ರೀ ಮಹದೇವು ಅವರು ಮಾತನಾಡಿ, ವಿಶ್ವವಿದ್ಯಾನಿಲಯವು ತೆಗೆದುಕೊಳ್ಳುವ ನಿರ್ಣಯವು ಸಮಾಜಕ್ಕೆ ಒಂದು ಒಳ್ಳೆಯ ಸಂದೇಶವನ್ನು ನೀಡಬೇಕೆಂದರು.

ಶ್ರೀ ನಾಗರಾಜು .ಸಿ ಅವರು ಮಾತನಾಡಿ, 10-20 ದಿನದೊಳಗೆ ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಅವರುಗಳು ರಾಜೀ ಸಂಧಾನವಾದರೆ ಪ್ರಕರಣವೇ ಮುಚ್ಚಿ ಹೋಗುತ್ತದೆ. ಆದ್ದರಿಂದ ಸದರಿ ಸಭೆಯಲ್ಲಿ ತೆಗೆದುಕೊಳ್ಳುವ ನಿರ್ಧಾರವು ಮುಖ್ಯವಾಗಿರುತ್ತದೆ ಎಂದರು.

ಕುಲಸಚಿವರು ಮಾತನಾಡಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು, ಸಿಂಡಿಕೇಟ್ ಸದಸ್ಯರು ಹಾಗೂ ಸಿಬ್ಬಂದಿಗಳನ್ನು ಹೊರತುಪಡಿಸಿ, ತಟಸ್ಥರಾದ ಹಾಗೂ ವಿಚಾರಣೆಯಲ್ಲಿ ಪರಿಣಿತಿ ಹೊಂದಿದ ಅಂದರೆ ನಿವೃತ್ತ ನ್ಯಾಯಾಧೀಶರನ್ನು ವಿಚಾರಣೆ ಮಾಡಲು ತೀರ್ಮಾನಿಸುವುದರಿಂದ ನಿಷ್ಪಕ್ಷಪಾತವಾದ ವಿಚಾರಣೆಯಾಗುತ್ತದೆ ಎಂದು ತಿಳಿಸಿದರು.

ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯವು ಶೈಕ್ಷಣಿಕ ಸಂಸ್ಥೆಯಾಗಿರುವುದರಿಂದ, ಏಕ ಸದಸ್ಯ ಸಮಿತಿ ರಚಿಸುವ ಬದಲು ಶೈಕ್ಷಣಿಕ ತಜ್ಞರನ್ನೊಳಗೊಂಡಂತೆ ಸಮಿತಿ ರಚಿಸಬೇಕೆಂದು ಅಭಿಪ್ರಾಯಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸಮಿತಿ ರಚನೆಯಲ್ಲಿ ಶೈಕ್ಷಣಿಕ ತಜ್ಞರನ್ನು ಸೇರ್ಪಡೆಗೊಳಿಸುವುದರಿಂದ ವಿಚಾರಣೆಯಲ್ಲಿ ಪ್ರಭಾವ ಬೀರಲು ಅವಕಾಶವಿರುತ್ತದೆ ಎಂದರು.

ಶ್ರೀ ಗೋಕುಲ್ ಗೋವರ್ಧನ್ ಮತ್ತು ಡಾ. ಟಿ.ಆರ್. ಚಂದ್ರಶೇಖರ್ ಅವರುಗಳು ಮಾತನಾಡಿ, ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಇಬ್ಬರಿಗೂ ಕಡ್ಡಾಯ ರಜೆಯ ಮೇಲೆ ತೆರಳಲು ಸೂಚಿಸಿ, ಒಂದು ತಿಂಗಳೊಳಗೆ ವಿಚಾರಣೆ ನಡೆಸಿ, ವರದಿ ಸಲ್ಲಿಸುವ ನಿಟ್ಟಿನಲ್ಲಿ ಸಮಿತಿ ರಚಿಸಬೇಕು. ತಡವಾದರೆ ಪ್ರಕರಣವು ಕೆಲವು ತಿರುವುಗಳನ್ನು ಪಡೆಯಬಹುದೆಂದರು.

ಡಾ. ಮಹದೇಶು ಅವರು ಮಾತನಾಡಿ, ಶಿವಕುಮಾರ್ .ಜೆ ಅವರು ಕಾಲೇಜಿಗೆ ಹಾಜರಾದರೆ, ಕೆಲವೊಂದು ದಾಖಲಾತಿಯನ್ನು ನಾಶಪಡಿಸುವ ಸಾಧ್ಯತೆಯಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಇಬ್ಬರನ್ನು ರಜೆ ಮೇಲೆ ತೆರಳಲು ಸೂಚಿಸುವುದರೊಂದಿಗೆ, ಸಮಿತಿ ರಚನೆ ಮಾಡಿ ವಿಚಾರಣೆ ನಡೆಸಬೇಕೆಂದು ಸಲಹೆ ನೀಡಿದರು.

ಈ ಸಲಹೆಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾಂಶುಪಾಲರು ಹಾಗೂ ಶಿವಕುಮಾರ್ .ಜೆ ಇಬ್ಬರನ್ನು ಕಡ್ಡಾಯವಾಗಿ ರಜೆಯ ಮೇಲೆ ತೆರಳಲು ಸೂಚಿಸಿ, ವಿಚಾರಣ ಸಮಿತಿ ರಚನೆ ಮಾಡಿ ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸಲಾಗುವುದು ಹಾಗೂ ವಿಚಾರಣೆ ಪೂರ್ಣಗೊಳ್ಳುವವರೆಗೆ ಇವರುಗಳು ಯಾವುದೇ ಕಾರಣಕ್ಕೂ ವಿಶ್ವವಿದ್ಯಾನಿಲಯದ ಅನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡಬಾರದೆಂದು ನಿರ್ದೇಶಿಸಲಾಗುವುದೆಂದು ತಿಳಿಸಿದರು.

ಶ್ರೀ ನಟರಾಜು .ಹೆಚ್.ಎಸ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರು ಹಾಗೂ ಅಧ್ಯಾಪಕೇತರರುಗಳಿಗೆ ಇನ್ನು ಮುಂದೆ ಈ ರೀತಿಯ ಪ್ರಕರಣಗಳು ನಡೆಯಬಾರದೆಂದು ಸುತ್ತೋಲೆ

ಹೊರಡಿಸುವುದು ಸೂಕ್ತವೆಂದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಶ್ರೀ ನಟರಾಜು .ಹೆಚ್.ಎಸ್ ಅವರು ತಿಳಿಸಿರುವಂತೆ ಸುತ್ತೋಲೆ ಹೊರಡಿಸಬಹುದು. ಸುತ್ತೋಲೆಯಲ್ಲಿ "ತಮ್ಮ ಇಲಾಖೆ ಮುಖ್ಯಸ್ಥರಿಂದ ಏನಾದರೂ ಕಿರುಕುಳ ಉಂಟಾದರೆ ಕುಲಪತಿ/ಕುಲಸಚಿವರಿಗೆ ದೂರು ಸಲ್ಲಿಸಬೇಕು" ಎಂಬ ವಾಕ್ಯವನ್ನು ಸೇರ್ಪಡೆಗೊಳಿಸಬೇಕೆಂದರು. ಈ ಪ್ರಸ್ತಾವನೆಗೆ ಮಾನ್ಯ ಕುಲಪತಿಗಳು ಒಪ್ಪಿಗೆ ಸೂಚಿಸಿದರು.

ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ ಅವರು ಮಾತನಾಡಿ, ಪ್ರತಿ ಕಾಲೇಜಿನಲ್ಲಿಯೂ "ಕುಂದುಕೊರತೆಗಳ ಸಮಿತಿ' ರಚಿಸುವುದು ಕಡ್ಡಾಯವಾಗಿದೆ. ಇದೇ ರೀತಿ ವಿಶ್ವವಿದ್ಯಾನಿಲಯದಲ್ಲೂ ರಚನೆ ಮಾಡಬೇಕೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, "ಕುಂದುಕೊರತೆಗಳ ಸಮಿತಿ' ರಚನೆಯು ಉದ್ಯೋಗಿಗಳು ಮಾತ್ರ ದೂರು ಸಲ್ಲಿಸಬಹುದು ಹೊರತು ಪ್ರಾಂಶುಪಾಲರು ದೂರು ಸಲ್ಲಿಸಲಾಗುವುದಿಲ್ಲವೆಂದು ಸ್ಪಷ್ಟನೆ ನೀಡಿದರು.

ಮೇಲ್ಕಂಡ ಅಂಶಗಳನ್ನು ಅವಲೋಕಿಸಿದ ಸಿಂಡಿಕೇಟ್ ವಿಶೇಷ ಸಭೆಯು ಈ ಕೆಳಕಂಡಂತೆ ತೀರ್ಮಾನಿಸಿತು.

| | |
|---|---|
| **ತೀರ್ಮಾನ** | ಯುವರಾಜ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಹೆಚ್.ಸಿ. ದೇವರಾಜೇಗೌಡ ಹಾಗೂ ಶ್ರೀ ಶಿವಕುಮಾರ್ .ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರುಗಳ ವಿರುದ್ಧ ವಿಚಾರಣೆ ಪೂರ್ಣಗೊಳಿಸಿ ವರದಿ ಸಲ್ಲಿಸುವವರೆಗೆ ಕಡ್ಡಾಯ ರಜೆಯ ಮೇಲೆ ಕಳುಹಿಸುವುದು ಹಾಗೂ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೇ ಯಾವುದೇ ಕಾರಣಕ್ಕೂ ಕೇಂದ್ರ ಸ್ಥಾನವನ್ನು ಬಿಡಬಾರದೆಂಬ ಷರತ್ತಿನೊಂದಿಗೆ ವಿಶ್ವವಿದ್ಯಾನಿಲಯದಿಂದ ನಿರ್ದೇಶನ ನೀಡುವುದು. ಈ ಪ್ರಕರಣದ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ, ಅವರು ನೀಡುವ ವರದಿಯ ಮೇರೆಗೆ ಕ್ರಮಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

17/01/24

Deputy Registrar (Authorities)
University of Mysore
Mysore

-187- (ಅನುಬಂಧ-8)

ಮೈ.ವಿ.ವಿ. ನಿಲಯ/ಆ.ಶಾ./ರಹಸ್ಯ ವಿಭಾಗ
ಕಾರ್ಯನಿರ್ವಾಹಕ ಸಂ:...
ದಿನಾಂಕ: 18/01/2024

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ, ಅಂಚೆ ಪೆಟ್ಟಿಗೆ ಸಂಖ್ಯೆ 406,
ಮೈಸೂರು-570 005.

ವಿಷಯ: ಶ್ರೀ ಶಿವಕುಮಾರ್. ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಆತ್ಮಹತ್ಯೆ ಹಾಗೂ ಇನ್ನಿತರ ಪ್ರಕರಣಗಳ ಸಂಬಂಧ ಇಲಾಖಾ ವಿಚಾರಣೆ ನಡೆಸುವ ಬಗ್ಗೆ.

ಉಲ್ಲೇಖ:
1. ಶ್ರೀ ಶಿವಕುಮಾರ್. ಜೆ ರವರು ಬರೆದಿರುವ ಡೆತ್‌ನೋಟ್ (Death Note) ವ್ಯಾಟ್ಸಾಪ್ ಪ್ರತಿ.
2. ಕಾರ್ಯದರ್ಶಿಗಳು, ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿ ವರ್ಗದವರ ಸಂಘ, ಕ್ರಾಫರ್ಡ್ ಭವನ, ಮೈಸೂರು ಇವರ ಪತ್ರ ದಿನಾಂಕ: 03.01.2024.
3. ಡಾ. ಭಾಗ್ಯಶ್ರೀ ಎಸ್ ಕೋಂ. ಶಿವಕುಮಾರ್.ಜೆ ಇವರ ಪತ್ರ ದಿನಾಂಕ: 03.01.2024 ಹಾಗೂ ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವ ಪ್ರಥಮ ವರ್ತಮಾನ ವರದಿಯನ್ನು ನೀಡಿರುವ ಪತ್ರ ದಿನಾಂಕ: 05.01.2024 ಹಾಗೂ ದೂರು ದಿನಾಂಕ: 04-01-2024.
4. ಅಧ್ಯಾಪಕೇತರ ನೌಕರರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ರ ದಿನಾಂಕ: 04.01.2024
5. ಶ್ರೀ ಸಿ.ಆರ್ ಮಹೇಶ್ ಕುಮಾರ್, ಅಧೀಕ್ಷಕರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ರ ದಿನಾಂಕ: 04.01.2024.
6. ಈ ಕಛೇರಿಯ ದಿನಾಂಕ: 05-01-2024ರ ಕಾರಣ ಕೇಳುವ ನೋಟಿಸ್
7. ಡಾ. ಹೆಚ್.ಸಿ.ದೇವರಾಜೇಗೌಡ ಇವರ ದಿನಾಂಕ: 08-01-2024ರ ಲಿಖಿತ ಹೇಳಿಕೆ
8. ದಿನಾಂಕ: 10-01-2024ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ.
9. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17-01-2024.

******

**<u>ಪ್ರಸ್ತಾವನೆ:</u>**

ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ಯುವರಾಜ ಕಾಲೇಜಿನಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಶಿವಕುಮಾರ್.ಜೆ ಇವರು ದಿನಾಂಕ: 03-01-2024ರಂದು ಮಧ್ಯಾಹ್ನ ಸುಮಾರು 12.30 ಗಂಟೆಯ ಸಮಯದಲ್ಲಿ ಯುವರಾಜ ಕಾಲೇಜಿನ ಆವರಣದಲ್ಲಿ ಆತ್ಮಹತ್ಯೆ ಪತ್ರವನ್ನು (Death Note) ಬರೆದಿಟ್ಟು ಅಪಾಯಕಾರಿ ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವುದು ತಿಳಿದು ಬಂದಿರುತ್ತದೆ. ಈ ಉದ್ಯೋಗಿಯು ಆತ್ಮಹತ್ಯೆಗೆ ಯತ್ನಿಸುವ ಮುನ್ನ ಉಲ್ಲೇಖಿತ (1)ರ ಆತ್ಮಹತ್ಯೆ ಪತ್ರ(Death Note)ದಲ್ಲಿ, ನಾನು ಆತ್ಮಹತ್ಯೆ ಮಾಡಿಕೊಳ್ಳಲು ಯುವರಾಜ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಸಿ.ದೇವರಾಜೇಗೌಡ ನೇರ ಕಾರಣರಾಗಿರುತ್ತಾರೆಂದು ಉಲ್ಲೇಖಿಸಿರುತ್ತಾರೆ.

ಇದಲ್ಲದೆ, ಉಲ್ಲೇಖಿತ(2)ರ ಪತ್ರದಲ್ಲಿ ಕಾರ್ಯದರ್ಶಿಗಳು, ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿ ವರ್ಗದವರ ಸಂಘ(ರಿ.), ಮೈಸೂರು ಅವರು ಈ ಘಟನೆ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ ಕೂಡಲೇ ಡಾ. ಹೆಚ್.ಸಿ.ದೇವರಾಜೇಗೌಡ, ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಶಿಸ್ತುಕ್ರಮ ಜರುಗಿಸಲು ಕೋರಿರುತ್ತಾರೆ. ಮುಂದುವರೆದು ಉಲ್ಲೇಖಿತ(3)ರ ಪತ್ರದಲ್ಲಿ ಶ್ರೀ ಶಿವಕುಮಾರ್.ಜೆ ರವರ ಪತ್ನಿಯವರು ಸಹ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ, ಮೇಲ್ಕಂಡ ಕೃತ್ಯದ ಬಗ್ಗೆ ವಿಮರ್ಶಿಸಿ ಕಾನೂನು ಕ್ರಮ ಜರುಗಿಸಿ ಅವರ ಪತಿಯ ಸ್ಥಿತಿಗೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸಲು ವಿನಂತಿಸಿರುತ್ತಾರೆ ಮತ್ತು ದಿನಾಂಕ: 05.01.2024ರಂದು ಈ ಪ್ರಕರಣದ ಸಂಬಂಧ ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಪ್ರಥಮ ವರ್ತಮಾನ ವರದಿ(FIR Copy) ಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಮುಂದುವರೆದು, ಉಲ್ಲೇಖಿತ (4)ರ ಪತ್ರದಲ್ಲಿ ಯುವರಾಜ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ 56 ಉದ್ಯೋಗಿಗಳು ಸಹ ಡಾ. ಹೆಚ್.ಸಿ.ದೇವರಾಜೇಗೌಡ, ಪ್ರಾಂಶುಪಾಲರು ಇವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಂಡು ಕಾಲೇಜಿನಲ್ಲಿ ನೆಮ್ಮದಿಯಿಂದ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಬೇಕೆಂದು ಹಾಗೂ ಉಲ್ಲೇಖಿತ (5)ರ ಪತ್ರದಲ್ಲಿ ಕಾಲೇಜಿನ ಅಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಮಹೇಶ್ ಕುಮಾರ್.ಸಿ.ಆರ್ ಅವರು ನನ್ನನ್ನು ಸಹ ಸದರಿಯವರು ಏಕವಚನದಿಂದ, ಅಗೌರವದಿಂದ ಮಾತನಾಡಿಸುತ್ತಿದ್ದು, ಇದರಿಂದ ಪ್ರತಿದಿನ ಕಾರ್ಯನಿರ್ವಹಿಸಲು ತೊಂದರೆಯಾಗುತ್ತಿದೆ. ನನ್ನನ್ನು ಎಲ್ಲಾ ಸಹೋದ್ಯೋಗಿಗಳ ಮುಂದೆಯೂ ಸಹ ಕೀಳಾಗಿ ಮಾತನಾಡುತ್ತಾರೆ. ಪ್ರತಿ ದಿವಸ

-188-



O/C

ಮಾನಸಿಕ ಹಿಂಸೆಯಿಂದ ದೈಹಿಕವಾಗಿ ದುರ್ಬಲನಾಗುತ್ತಿದ್ದು, ಇದರಿಂದ ಮೆಡಿಕಲ್ ಟ್ರೀಟ್ಮೆಂಟ್ ಅನ್ನು ಪಡೆಯುತ್ತಿದ್ದು ನನ್ನನ್ನು ಬೇರೆಡೆಗೆ ವರ್ಗಾವಣೆ ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ.

ಉಲ್ಲೇಖ(6)ರಲ್ಲಿ ಈ ಮೇಲೆ ವಿವರಿಸಿರುವ ಘಟನೆ ಮತ್ತು ಸಲ್ಲಿಸಿರುವ ಮನವಿಗಳು ಹಾಗೂ ಲಕ್ಷ್ಮೀಪುರಂ ಪೊಲೀಸ್ ಠಾಣೆಯ ಪ್ರಥಮ ವರ್ತಮಾನ ವರದಿ(FIR Copy)ಯ ಅನ್ವಯ ನಿಮ್ಮ ಮೇಲೆ ಏಕೆ ಶಿಸ್ತುಕ್ರಮ ಜರುಗಿಸಬಾರದು ಎಂಬುದಕ್ಕೆ ಲಿಖಿತ ರೂಪದಲ್ಲಿ ಸ್ಪಷ್ಟೀಕರಣವನ್ನು ಈ ನೋಟಿಸ್ ತಲುಪಿದ 24 ಗಂಟೆಗಳ ಒಳಗಾಗಿ ನೀಡುವಂತೆ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿತ್ತು. ಉಲ್ಲೇಖ(7)ರಲ್ಲಿ ಡಾ. ಹೆಚ್.ಸಿ.ದೇವರಾಜೇಗೌಡ ಅವರು ದಿನಾಂಕ: 08-01-2024ರಂದು ಸದರಿ ನೋಟಿಸ್‌ಗೆ ಯಾವುದೇ ಪೂರಕ ದಾಖಲೆಗಳಿಲ್ಲದೆ ಸಮಜಾಯಿಷಿ ನೀಡಿದ್ದ ಹಿನ್ನೆಲೆಯಲ್ಲಿ ದಿನಾಂಕ: 10-01-2024ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸಲಾಗಿ ಸದರಿ ಸಭೆಯಲ್ಲಿ ಈ ಕೆಳಗಿನಂತೆ ತೀರ್ಮಾನಿಸಲಾಗಿರುತ್ತದೆ.

> "ಯುವರಾಜ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಹೆಚ್.ಸಿ.ದೇವರಾಜೇಗೌಡ ಹಾಗೂ ಶ್ರೀ ಶಿವಕುಮಾರ್. ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರುಗಳ ವಿರುದ್ಧ ವಿಚಾರಣೆ ಪೂರ್ಣಗೊಳಿಸಿ ವರದಿ ಸಲ್ಲಿಸುವವರೆಗೆ ಕಡ್ಡಾಯ ರಜೆಯ ಮೇಲೆ ಕಳುಹಿಸುವುದು ಹಾಗೂ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೇ ಯಾವುದೇ ಕಾರಣಕ್ಕೂ ಕೇಂದ್ರ ಸ್ಥಾನವನ್ನು ಬಿಡಬಾರದೆಂಬ ಷರತ್ತಿನೊಂದಿಗೆ ವಿಶ್ವವಿದ್ಯಾನಿಲಯದಿಂದ ನಿರ್ದೇಶನ ನೀಡುವುದು. ಈ ಪ್ರಕರಣದ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ, ಅವರು ನೀಡುವ ವರದಿಯ ಮೇರೆಗೆ ಕ್ರಮಕೈಗೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು".

ಅದರಂತೆ ಈ ಕೆಳಕಂಡ ಆದೇಶ.

**ವಿ.ವಿ. ಆದೇಶ ಸಂಖ್ಯೆ: ಇಟಿ12/161/2017-18 ದಿನಾಂಕ: 17ನೇ ಜನವರಿ 2024**

ದಿನಾಂಕ 10-01-2024ರಂದು ಜರುಗಿದ ವಿಶೇಷ ಸಿಂಡಿಕೇಟ್ (ಶಿಸ್ತು ಪ್ರಾಧಿಕಾರ) ಸಭೆಯ ತೀರ್ಮಾನದಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಅನ್ವಯ ಡಾ. ಹೆಚ್.ಸಿ.ದೇವರಾಜೇಗೌಡ, ಪ್ರಾಂಶುಪಾಲರು (ಪ್ರಭಾರ) ಮತ್ತು ಶ್ರೀ ಜೆ.ಶಿವಕುಮಾರ, ಪ್ರಥಮದರ್ಜೆ ಸಹಾಯಕರು, ಯುವರಾಜ ಕಾಲೇಜು ಇವರುಗಳ ವಿರುದ್ಧ ನಿವೃತ್ತ ನ್ಯಾಯಾಧೀಶರಿಂದ 'ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿಸಿಎ ಅಧಿನಿಯಮ 1983'ರ ಅನ್ವಯ ಇಲಾಖಾ ವಿಚಾರಣೆಯನ್ನು ನಡೆಸಿ ಅವರು ಸಲ್ಲಿಸುವ ವಿಚಾರಣೆ ವರದಿಯ ಆಧಾರದ ಮೇಲೆ ಕ್ರಮವಹಿಸಬೇಕಾಗಿರುವುದರಿಂದ ಈ ಇಬ್ಬರು ಉದ್ಯೋಗಿಗಳನ್ನು ತಕ್ಷಣದಿಂದ ಜಾರಿಗೆ ಬಂದಂತೆ ಹಾಗೂ ವಿಚಾರಣೆ ಮುಗಿಯುವವರೆಗೂ ಕಡ್ಡಾಯ ರಜೆಯ ಮೇಲೆ ತೆರಳುವಂತೆ ಆದೇಶಿಸಿದೆ ಮತ್ತು ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿ ಪಡೆಯದೆ ಯಾವುದೇ ಕಾರಣಕ್ಕೂ ಕೇಂದ್ರಸ್ಥಾನವನ್ನು ಬಿಡದಿರುವಂತೆ ಷರತ್ತನ್ನು ವಿಧಿಸಲಾಗಿದೆ.

ಈ ಅವಧಿಯಲ್ಲಿ ಡಾ. ಮಹೇಶ್ ಎಂ.ಕೆ., ಆಡಳಿತಾಧಿಕಾರಿಗಳು ಯುವರಾಜ ಕಾಲೇಜು ಇವರು ಪ್ರಭಾರ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುವಂತೆ ಸೂಚಿಸಲಾಗಿದೆ.

ಆದೇಶದ ಮೇರೆಗೆ,

17/1/2024

ಕುಲಸಚಿವ

ಇವರಿಗೆ:

1. ಡಾ. ಹೆಚ್.ಸಿ.ದೇವರಾಜೇಗೌಡ, ಪ್ರಾಂಶುಪಾಲರು (ಪ್ರಭಾರ), ಯುವರಾಜ ಕಾಲೇಜು, ಮೈಸೂರು.
2. ಶ್ರೀ ಶಿವಕುಮಾರ್.ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು.
3. ಡಾ. ಮಹೇಶ್ ಎಂ.ಕೆ., ಆಡಳಿತಾಧಿಕಾರಿಗಳು, ಯುವರಾಜ ಕಾಲೇಜು, ಮೈಸೂರು-ಸಂಬಂಧಪಟ್ಟ ಉದ್ಯೋಗಿಗಳು ತಕ್ಷಣವೇ ರಜೆಯ ಮೇಲೆ ತೆರಳುವಂತೆ ಕ್ರಮವಹಿಸುವುದು ಮತ್ತು ಅದರ ಪ್ರತಿಯನ್ನು ಈ ಕಚೇರಿಗೆ ತಲುಪಿಸುವುದು.
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ವಿಷಯ ನಿರ್ವಾಹಕರು ಇಟಿ-5, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಉಪಕುಲಸಚಿವರು(ಸಾಮಾನ್ಯ/ಶೈಕ್ಷಣಿಕ/ಪ್ರಾಧಿಕಾರ), ಸಹಾಯಕ ಕುಲಸಚಿವ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವರವರ/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈವಿವಿ, ಮೈಸೂರು.
8. ಕಛೇರಿ ಪ್ರತಿ

(ಶಬಡಿತ-೫)
-189-

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-
570005

ಸಂಖ್ಯೆ:ಇಟಿ12/161/2017-18 ದಿನಾಂಕ: 18-01-2024

## ತಿದ್ದುಪಡಿ

ವಿಷಯ: ಶ್ರೀ. ಶಿವಕುಮಾರ್. ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ಇವರ ಆತ್ಮಹತ್ಯೆ ಯತ್ನ ಹಾಗೂ ಇನ್ನಿತರ ಪ್ರಕರಣಗಳ ಸಂಬಂಧ ಇಲಾಖಾ ವಿಚಾರಣೆ ನಡೆಸುವ ಬಗ್ಗೆ.

ಉಲ್ಲೇಖ:ವಿ.ವಿ ಆದೇಶ ಸಂಖ್ಯೆ:ಇಟಿ12/161/2017-18 ದಿನಾಂಕ:17-01-2024.

*****

ಮೇಲ್ಕಂಡ ಉಲ್ಲೇಖಿತ ಆದೇಶ ಪತ್ರದಲ್ಲಿನ ಪ್ರಾರಂಭದಲ್ಲಿ,"ದಿನಾಂಕ:10-01-2014ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ತೀರ್ಮಾನದಂತೆ" ಎಂದು ತಪ್ಪಾಗಿ ನಮೂದಾಗಿದ್ದು, ಅದನ್ನು 'ದಿನಾಂಕ:10-01-2014' ಎಂಬುದರ ಬದಲಾಗಿ "ದಿನಾಂಕ:10-01-2024ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ತೀರ್ಮಾನದಂತೆ" ಎಂದು ತಿದ್ದಿ ಓದಿಕೊಳ್ಳುವುದು.

ಉಲ್ಲೇಖಿತ ಆದೇಶದಲ್ಲಿನ ಇನ್ನುಳಿದ ಎಲ್ಲಾ ಅಂಶಗಳು ಯಥಾವತ್ತಾಗಿರುತ್ತವೆ.

ಉಪಕುಲಸಚಿವ(ಸಾಮಾನ್ಯ)

ಉಪ ಕುಲಸಚಿವ (ಸಾಮಾನ್ಯ)
ಆಡಳಿತ
ಮೈ.ವಿ.ವಿ. ಮೈಸೂರು

ಇವರಿಗೆ:

1. ಡಾ.ಹೆಚ್.ಸಿ. ದೇವರಾಜೇಗೌಡ, ಪ್ರಾಂಶುಪಾಲರು (ಪ್ರಭಾರ), ಯುವರಾಜ ಕಾಲೇಜು, ಮೈಸೂರು.
2. ಶ್ರೀ ಶಿವಕುಮಾರ್.ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು.
3. ಡಾ. ಮಹೇಶ್ ಎಂ.ಕೆ., ಆಡಳಿತಾಧಿಕಾರಿಗಳು, ಯುವರಾಜ ಕಾಲೇಜು, ಮೈಸೂರು.
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ವಿಷಯ ನಿರ್ವಾಹಕರು ಇಟಿ-5, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಉಪಕುಲಸಚಿವರು(ಸಾಮಾನ್ಯ/ಶೈಕ್ಷಣಿಕ/ಪ್ರಾಧಿಕಾರ), ಸಹಾಯಕ ಕುಲಸಚಿವ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವರವರ/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ

**ದೋಷಾರೋಪಣ ಪಟ್ಟಿ**

1. ಶ್ರೀ ಶಿವಕುಮಾರ್. ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ:03-01-2024ರಂದು ತಮ್ಮ ಆತ್ಮಹತ್ಯೆ ಪತ್ರದಲ್ಲಿ ಅವರ ಸಾವಿಗೆ ಡಾ.ಹೆಚ್.ಸಿ.ದೇವರಾಜೆಗೌಡ, ಪ್ರಾಂಶುಪಾಲರು, ಯುವರಾಜ ಕಾಲೇಜು ಇವರನ್ನು ನೇರ ಕಾರಣರಾಗಿರುತ್ತಾರೆಂದು ಆರೋಪಿಸಲಾಗಿದೆ.

2. ಶ್ರೀ ಶಿವಕುಮಾರ್. ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ:03-01-2024ರಂದು ತಮ್ಮ ಆತ್ಮಹತ್ಯೆ ಪತ್ರದಲ್ಲಿ ಡಾ.ಬಿ.ಎನ್.ಯಶೋಧ ಅವರು ಪ್ರಾಂಶುಪಾಲರಾಗಿದ್ದ ಅವಧಿಯಲ್ಲಿನ ಲೆಕ್ಕಪತ್ರಗಳ Private Audit ಮಾಡಿಸುವ ಸಲುವಾಗಿ ದಾಖಲಾತಿಗಳನ್ನು ಪಡೆದಿದ್ದು, ಅನಂತರ ಅನೇಕ ಬಾರಿ ಕೇಳಿದರೂ ಪ್ರಾಂಶುಪಾಲರಾದ ಡಾ.ಹೆಚ್.ಸಿ.ದೇವರಾಜೇಗೌಡ ಅವರು ಹಿಂದಿರುಗಿಸಿರುವುದಿಲ್ಲವೆಂದು ಆರೋಪಿಸಿರುತ್ತಾರೆ.

3. ಶ್ರೀ ಶಿವಕುಮಾರ್ ಜೆ ರವರ ಪತ್ನಿಯವರಾದ ಡಾ.ಭಾಗ್ಯಶ್ರೀ. ಎನ್, ಅತಿಥಿ ಉಪನ್ಯಾಸಕರು, ವಿ.ವಿ ಸಂಜೆ ಕಾಲೇಜು, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ, ಮೇಲ್ಕಂಡ ಕೃತ್ಯದ ಬಗ್ಗೆ ವಿಮರ್ಶಿಸಿ ಕಾನೂನು ಕ್ರಮ ಜರುಗಿಸಿ ಅವರ ಪತಿಯ ಸ್ಥಿತಿಗೆ ಕಾರಣರಾದ ಡಾ.ಹೆಚ್.ಸಿ.ದೇವರಾಜೇಗೌಡ ಅವರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿ, ಈ ಸಂಬಂಧ ಲಕ್ಷ್ಮೀಪುರಂ ಪೋಲಿಸ್ ಠಾಣೆಯಲ್ಲಿ ದಾಖಲಿಸಲಾಗಿರುವ ದೂರಿನ ಪ್ರಥಮ ವರ್ತಮಾನ ವರದಿ(FIR Copy)ಯನ್ನು ತಮ್ಮ ಪತ್ರದೊಂದಿಗೆ ಲಗತ್ತಿಸಿ ನೀಡಿರುವ ದೂರಿನ ಅನ್ವಯ ಆರೋಪಿಸಲಾಗಿದೆ.

4. ಶ್ರೀ ಮಹೇಶ್ ಕುಮಾರ್.ಸಿ.ಆರ್, ಅಧೀಕ್ಷಕರು, ಯುವರಾಜ ಕಾಲೇಜು, ಮೈಸೂರು ಇವರನ್ನು ಸಹ ಪ್ರಾಂಶುಪಾಲರಾದ ಡಾ.ಹೆಚ್.ಸಿ.ದೇವರಾಜೇಗೌಡ ಅವರು ಏಕವಚನದಿಂದ, ಅಗೌರವದಿಂದ ಮಾತಾನಾಡಿಸುತ್ತಿದ್ದು, ಇದರಿಂದ ಪ್ರತಿದಿನ ಕಾರ್ಯನಿರ್ವಹಿಸಲು ತೊಂದರೆಯಾಗುತ್ತಿದೆ. ತನ್ನನ್ನು ಎಲ್ಲಾ ಸಹೋದ್ಯೋಗಿಗಳ ಮುಂದೆಯೂ ಸಹ ಕೀಳಾಗಿ ಮಾತನಾಡುತ್ತಾರೆ. ಪ್ರತಿ ದಿವಸ ಮಾನಸಿಕ ಹಿಂಸೆಯಿಂದ ದೈಹಿಕವಾಗಿ ದುರ್ಬಲನಾಗುತ್ತಿದ್ದು, ಇದರಿಂದ ಮೆಡಿಕಲ್ ಟ್ರೀಟ್ಮೆಂಟ್ ಅನ್ನು ಪಡೆಯುತ್ತಿದ್ದೇನೆ ಎಂದು ಆರೋಪಿಸಿರುತ್ತಾರೆ.

5. ಯುವರಾಜ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ 56 ಉದ್ಯೋಗಿಗಳೂ ಸಹ ಪ್ರಾಂಶುಪಾಲರಾದ ಡಾ.ಹೆಚ್.ಸಿ.ದೇವರಾಜೇಗೌಡ ಅವರು ವಿನಾಕಾರಣ ಕಿರುಕುಳ ನೀಡುತ್ತಿದ್ದು ಇದರಿಂದ ನಮ್ಮ ಸಹೋದ್ಯೋಗಿಯಾದ ಶ್ರೀ ಶಿವಕುಮಾರ್. ಜೆ ಆತ್ಮಹತ್ಯೆ ಪ್ರಯತ್ನವನ್ನು ಮಾಡಿ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಆದುದರಿಂದ ಇವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಂಡು ಕಾಲೇಜಿನಲ್ಲಿ ನೆಮ್ಮದಿಯಿಂದ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಬೇಕೆಂದು ಆರೋಪಿಸಿರುತ್ತಾರೆ.

6. ಕಾರ್ಯದರ್ಶಿಗಳು, ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿ ವರ್ಗದವರ ಸಂಘ(ರಿ.), ಮೈಸೂರು ಇವರು ಶ್ರೀ ಶಿವಕುಮಾರ್ ಜೆ ಇವರ ಆತ್ಮಹತ್ಯೆ ಯತ್ನಕ್ಕೆ ಕಾರಣರಾದ ಡಾ.ಹೆಚ್.ಸಿ.ದೇವರಾಜೇಗೌಡ, ಪ್ರಾಂಶುಪಾಲರು, ಯುವರಾಜ ಕಾಲೇಜು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ನ್ಯಾಯ ದೊರಕಿಸಿ ಕೊಡಬೇಕೆಂದು ಆರೋಪಿಸಿರುತ್ತಾರೆ.

7. ಶ್ರೀ ಶಿವಕುಮಾರ್. ಜೆ ಇವರ ಆತ್ಮಹತ್ಯೆ ಪ್ರಯತ್ನ ಪ್ರಕರಣವು ದಿನಾಂಕ:04-01-2023ರ ಜಿಲ್ಲಾ ಹಾಗೂ ರಾಜ್ಯ ಮಟ್ಟದ ದಿನಪತ್ರಿಕೆಗಳಲ್ಲಿ ವರದಿಯು ಬಿತ್ತರವಾಗಿದ್ದು, ಇದರಿಂದ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಯುವರಾಜ ಕಾಲೇಜಿನ ಘನತೆಗೆ ಧಕ್ಕೆಯುಂಟಾಗುವಂತೆ ನಡೆದುಕೊಂಡಿರುತ್ತಾರೆಂದು ಡಾ.ಹೆಚ್.ಸಿ.ದೇವರಾಜೇಗೌಡರವರ ವಿರುದ್ಧ ಆರೋಪಿಸಲಾಗಿದೆ.

ಡಾ.ಹೆಚ್.ಸಿ.ದೇವರಾಜೇಗೌಡ ಇವರ ನಡತೆಯು ಮೈಸೂರು ವಿಶ್ವವಿದ್ಯಾನಿಲಯದ ಸಿಸಿಎ ಅಧಿನಿಯಮ 1983ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

-191-

**ಆರೋಪಣಾ ಪಟ್ಟಿ**

1. ಶ್ರೀ ಶಿವಕುಮಾರ್. ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ:03-01-2024ರಂದು ತಮ್ಮ ಆತ್ಮಹತ್ಯೆ ಪತ್ರದಲ್ಲಿ ಅವರ ಸಾವಿಗೆ ಡಾ.ಹೆಚ್.ಸಿ.ದೇವರಾಜೆಗೌಡ, ಪ್ರಾಂಶುಪಾಲರು, ಯುವರಾಜ ಕಾಲೇಜು ಇವರನ್ನು ನೇರ ಕಾರಣರಾಗಿರುತ್ತಾರೆಂದು ಆರೋಪಿಸಲಾಗಿದೆ.

2. ಶ್ರೀ ಶಿವಕುಮಾರ್. ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ:03-01-2024ರಂದು ತಮ್ಮ ಆತ್ಮಹತ್ಯೆ ಪತ್ರದಲ್ಲಿ ಡಾ.ಟಿ.ಎನ್.ಯಶೋಧ ಅವರು ಪ್ರಾಂಶುಪಾಲರಾಗಿದ್ದ ಅವಧಿಯಲ್ಲಿನ ಲೆಕ್ಕಪತ್ರಗಳ Private Audit ಮಾಡಿಸುವ ಸಲುವಾಗಿ ದಾಖಲಾತಿಗಳನ್ನು ಪಡೆದಿದ್ದು, ಅನಂತರ ಅನೇಕ ಬಾರಿ ಕೇಳಿದರೂ ಪ್ರಾಂಶುಪಾಲರಾದ ಡಾ.ಹೆಚ್.ಸಿ.ದೇವರಾಜೇಗೌಡ ಅವರು ಹಿಂದಿರುಗಿಸಿರುವುದಿಲ್ಲವೆಂದು ಆರೋಪಿಸಿರುತ್ತಾರೆ.

3. ಶ್ರೀ ಶಿವಕುಮಾರ್ ಜೆ ರವರ ಪತ್ನಿಯವರಾದ ಡಾ.ಭಾಗ್ಯಶ್ರೀ. ಎನ್, ಅತಿಥಿ ಉಪನ್ಯಾಸಕರು, ವಿ.ವಿ ಸಂಜೆ ಕಾಲೇಜು, ಮೈಸೂರು ಇವರು ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿ, ಮೇಲ್ಕಂಡ ಕೃತ್ಯದ ಬಗ್ಗೆ ವಿಮರ್ಶಿಸಿ ಕಾನೂನು ಕ್ರಮ ಜರುಗಿಸಿ ಅವರ ಪತಿಯ ಸ್ಥಿತಿಗೆ ಕಾರಣರಾದ ಡಾ.ಹೆಚ್.ಸಿ.ದೇವರಾಜೇಗೌಡ ಅವರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿ, ಈ ಸಂಬಂಧ ಲಕ್ಷ್ಮೀಪುರಂ ಪೋಲಿಸ್ ಠಾಣೆಯಲ್ಲಿ ದಾಖಲಿಸಲಾಗಿರುವ ದೂರಿನ ಪ್ರಥಮ ವರ್ತಮಾನ ವರದಿ(FIR Copy)ಯನ್ನು ತಮ್ಮ ಪತ್ರದೊಂದಿಗೆ ಲಗತ್ತಿಸಿ ನೀಡಿರುವ ದೂರಿನ ಅನ್ವಯ ಆರೋಪಿಸಲಾಗಿದೆ.

4. ಶ್ರೀ ಮಹೇಶ್ ಕುಮಾರ್.ಸಿ.ಆರ್, ಅಧೀಕ್ಷಕರು, ಯುವರಾಜ ಕಾಲೇಜು, ಮೈಸೂರು ಇವರನ್ನು ಸಹ ಪ್ರಾಂಶುಪಾಲರಾದ ಡಾ.ಹೆಚ್.ಸಿ.ದೇವರಾಜೇಗೌಡ ಅವರು ಏಕವಚನದಿಂದ, ಅಗೌರವದಿಂದ ಮಾತಾನಾಡಿಸುತ್ತಿದ್ದು, ಇದರಿಂದ ಪ್ರತಿದಿನ ಕಾರ್ಯನಿರ್ವಹಿಸಲು ತೊಂದರೆಯಾಗುತ್ತಿದೆ. ತನ್ನನ್ನು ಎಲ್ಲಾ ಸಹೋದ್ಯೋಗಿಗಳ ಮುಂದೆಯೂ ಸಹ ಕೀಳಾಗಿ ಮಾತನಾಡುತ್ತಾರೆ. ಪ್ರತಿ ದಿವಸ ಮಾನಸಿಕ ಹಿಂಸೆಯಿಂದ ದೈಹಿಕವಾಗಿ ದುರ್ಬಲನಾಗುತ್ತಿದ್ದು, ಇದರಿಂದ ಮೆಡಿಕಲ್ ಟ್ರೀಟ್ಮೆಂಟ್ ಅನ್ನು ಪಡೆಯುತ್ತಿದ್ದೇನೆ ಎಂದು ಆರೋಪಿಸಿರುತ್ತಾರೆ.

5. ಯುವರಾಜ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ 56 ಉದ್ಯೋಗಿಗಳೂ ಸಹ ಪ್ರಾಂಶುಪಾಲರಾದ ಡಾ.ಹೆಚ್.ಸಿ.ದೇವರಾಜೇಗೌಡ ಅವರು ವಿನಾಕಾರಣ ಕಿರುಕುಳ ನೀಡುತ್ತಿದ್ದು ಇದರಿಂದ ನಮ್ಮ ಸಹೋದ್ಯೋಗಿಯಾದ ಶ್ರೀ ಶಿವಕುಮಾರ್. ಜೆ ಆತ್ಮಹತ್ಯೆ ಪ್ರಯತ್ನವನ್ನು ಮಾಡಿ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಆದುದರಿಂದ ಇವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಂಡು ಕಾಲೇಜಿನಲ್ಲಿ ನೆಮ್ಮದಿಯಿಂದ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಬೇಕೆಂದು ಆರೋಪಿಸಿರುತ್ತಾರೆ.

6. ಕಾರ್ಯದರ್ಶಿಗಳು, ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿ ವರ್ಗದವರ ಸಂಘ(ರಿ.), ಮೈಸೂರು ಇವರು ಶ್ರೀ ಶಿವಕುಮಾರ್ ಜೆ ಇವರ ಆತ್ಮಹತ್ಯೆ ಯತ್ನಕ್ಕೆ ಕಾರಣರಾದ ಡಾ.ಹೆಚ್.ಸಿ.ದೇವರಾಜೇಗೌಡ, ಪ್ರಾಂಶುಪಾಲರು, ಯುವರಾಜ ಕಾಲೇಜು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ನ್ಯಾಯ ದೊರಕಿಸಿ ಕೊಡಬೇಕೆಂದು ಆರೋಪಿಸಿರುತ್ತಾರೆ.

7. ಶ್ರೀ ಶಿವಕುಮಾರ್. ಜೆ ಇವರ ಆತ್ಮಹತ್ಯೆ ಪ್ರಯತ್ನ ಪ್ರಕರಣವು ದಿನಾಂಕ:04-01-2023ರ ಜಿಲ್ಲಾ ಹಾಗೂ ರಾಜ್ಯ ಮಟ್ಟದ ದಿನಪತ್ರಿಕೆಗಳಲ್ಲಿ ವರದಿಯು ಚಿತ್ತರವಾಗಿದ್ದು, ಇದರಿಂದ ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಯುವರಾಜ ಕಾಲೇಜಿನ ಘನತೆಗೆ ಧಕ್ಕೆಯುಂಟಾಗುವಂತೆ ನಡೆದುಕೊಂಡಿರುತ್ತಾರೆಂದು ಡಾ.ಹೆಚ್.ಸಿ.ದೇವರಾಜೇಗೌಡರವರ ವಿರುದ್ಧ ಆರೋಪಿಸಲಾಗಿದೆ.

ಡಾ.ಹೆಚ್.ಸಿ.ದೇವರಾಜೇಗೌಡ ಇವರ ನಡತೆಯು ಮೈಸೂರು ವಿಶ್ವವಿದ್ಯಾನಿಲಯದ ಸಿಸಿಎ ಅಧಿನಿಯಮ 1983ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿರುತ್ತದೆ.

**ದಾಖಲಾತಿಗಳ ಪಟ್ಟಿ**

1. ಶ್ರೀ ಶಿವಕುಮಾರ್. ಜೆ ರವರು ಬರೆದಿರುವ ಡೆತ್‌ನೋಟ್ (Death Note) ವ್ಯಾಟ್ಸಾಪ್ ಪ್ರತಿ.
2. ಶ್ರೀ ಸಿ.ಆರ್ ಮಹೇಶ್ ಕುಮಾರ್, ಅಧೀಕ್ಷಕರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ರ ದಿನಾಂಕ:04.01.2024.
3. ಅಧ್ಯಾಪಕೇತರ ನೌಕರರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ರ ದಿನಾಂಕ:04.01.2024.
4. ಕಾರ್ಯದರ್ಶಿಗಳು, ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಸಿಬ್ಬಂದಿ ವರ್ಗದವರ ಸಂಘ, ಕ್ರಾಫರ್ಡ್ ಭವನ, ಮೈಸೂರು ಇವರ ಪತ್ರ ದಿನಾಂಕ:03.01.2024.
5. ಡಾ. ಭಾಗ್ಯಶ್ರೀ ಎಸ್ ಕೋಂ. ಶಿವಕುಮಾರ್. ಜೆ ಇವರ ಪತ್ರ ದಿನಾಂಕ:03.01.2024.
6. ಪ್ರಕರಣದ ಸಂಬಂಧ ಬಿತ್ತರವಾದ ದಿನಾಂಕ:04-01-2024ರ ಪತ್ರಿಕೆಗಳ ಪ್ರತಿ.
7. ಈ ಸಂಬಂಧ ಲಕ್ಷ್ಮೀಪುರಂ ಪೋಲಿಸ್ ಠಾಣೆಯಲ್ಲಿ ದಾಖಲಿಸಲಾಗಿರುವ ದೂರಿನ ಪ್ರಥಮ ವರ್ತಮಾನ ವರದಿ(FIR Copy)ಯ ಪ್ರತಿ

**ಸಾಕ್ಷಿದಾರರ ಪಟ್ಟಿ**

1. ಶ್ರೀ ಶಿವಕುಮಾರ್. ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಶ್ರೀ ಸಿ.ಆರ್ ಮಹೇಶ್ ಕುಮಾರ್, ಅಧೀಕ್ಷಕರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. 56 ಅಧ್ಯಾಪಕೇತರ ನೌಕರರು, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಡಾ. ಭಾಗ್ಯಶ್ರೀ ಎಸ್ ಕೋಂ. ಶಿವಕುಮಾರ್. ಜೆ, ಪ್ರಥಮ ದರ್ಜೆ ಸಹಾಯಕ, ಯುವರಾಜ ಕಾಲೇಜು, ಮೈಸೂರು.
5. ಡಾ.ಎಂ.ಕೆ.ಮಹೇಶ್, ಆಡಳಿತಾಧಿಕಾರಿಗಳು, ಯುವರಾಜ ಕಾಲೇಜು, ಮೈಸೂರು.
6. ಶ್ರೀ ಮಹದೇವಪ್ಪ.ಎಸ್, ಅಧೀಕ್ಷಕರು, ಯುವರಾಜ ಕಾಲೇಜು, ಮೈಸೂರು.